

894 · 814 308 72
A-NA N94
ಗ್ರಂಥ ಸ್ವಾಮ್ಯ ವಿಭಾಗ

# ಡೆತ್ ಚೇಸ್

9103
1994

ಬಿ. ವಿ. ಅನಂತರಾವ್

ಎ. ಬಿ. ಎಚ್. ಏಜೆನ್ಸೀಸ್
217/ಎ, 56ನೇ ಅಡ್ಡ ರಸ್ತೆ, 4ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560 010

ಪ್ರಖ್ಯಾತ ಲೇಖಕರಾದ ಬಿ. ವಿ. ಅನಂತರಾಮ್‌ರವರು ಬರೆದ, ಈ ಕೃತಿಯು ಎ. ಬಿ. ಎಚ್. ಏಜೆನ್ಸೀಸ್‌ರವರಿಂದ ಪ್ರಕಟಗೊಂಡಿದೆ.

G550SCR

ಮೊದಲ ಮುದ್ರಣ : 1994

ಕೃತಿ : ಡೆತ್ ಚೇಸ್

ಹಕ್ಕುಗಳು : ಬಿ. ವಿ. ಅನಂತರಾಮ್

ಬೆಲೆ : ರೂ. 17-00

ಮುದ್ರಣ :

ಶ್ರೀ ಸತ್ಯನಾರಾಯಣ ಪ್ರೆಸ್

ಗೆಜ್ಜಐಸೆಟ್ಟಿ ಗಲ್ಲಿ, ಅರಳೇಪೇಟೆ

ಬೆಂಗಳೂರು - 560053

# ಮುನ್ನುಡಿ

ಆತ್ಮೀಯ ಓದುಗ ಗೆಳೆಯ, ಗೆಳತಿಯರೇ,

ಜಿಂಕೆಯ ಹೊಸದೊಂದು ಅಸೈನ್‌ಮೆಂಟ್ ನಿಮ್ಮ ಕೈಯಲ್ಲಿಡುತ್ತಿರುವೆ. ಓದಿ ಅಭಿಪ್ರಾಯ ತಿಳಿಸಿ.

ಕೃತಿಯನ್ನು ಹೊರ ತರುತ್ತಿರುವ ಎ.ಬಿ.ಎಚ್. ಏಜೆನ್ಸೀಸ್‌ನ ಆರ್. ಬಾಲಕೃಷ್ಣರವರಿಗೆ ಕೃತಜ್ಞ.

ಮುಖಚಿತ್ರ ಕಲಾವಿದರಿಗೂ ಅಚ್ಚುಕೂಟದ ಗೆಳೆಯರಿಗೂ ವಂದನೆ.

ವಿಶ್ವಾಸವಿರಲಿ
ಬಿ. ವಿ. ಅನಂತರಾಮ್

1652, ಪ್ರಕಾಶನಗರ,
ಮೂರನೇ ಹಂತ,
ಬೆಂಗಳೂರು–560 021

# ಮುಂದಿನ ಬಿಡುಗಡೆ

ಡೇಂಜರ್ ಸಿಗ್ನಲ್ — ಬಿ. ವಿ. ಅನಂತರಾವ್

ವೀನಸ್ ಟ್ರ್ಯಾಪ್ — ಸಿ. ಎಸ್. ರಾವ್

ಟಾಪ್ ಗನ್ — ಬಿ. ವಿ. ಅನಂತರಾವ್

ಉತ್ಸಾಹಿ ಯುವ ಲೇಖಕ

**ಕೆ. ಜಿ. ರಾಜ್‌ರವರ**

## ಇಂಡೈರೆಕ್ಟ್ ಕಿಲ್ಲಿಂಗ್

**ವಿವರಗಳಿಗೆ ಸಂಪರ್ಕಿಸಿ**

**ಎ. ಬಿ. ಎಚ್. ಏಜೆನ್ಸೀಸ್**

217/ಎ, 56ನೇ ಅಡ್ಡ ರಸ್ತೆ, 4ನೇ ಬ್ಲಾಕ್.

ರಾಜಾಜಿನಗರ, ಬೆಂಗಳೂರು–560 010

# 1

ಗಡಿಯಾರ ನೋಡಿಕೊಂಡ ಮಹೇಶ. ಸಂಜೆ ಆರು ಗಂಟೆಯೆಂದು ಸೂಚಿಸುತ್ತಿತ್ತು ಗಡಿಯಾರದ ಮುಳ್ಳು. ಬಿಜಿ ಹವರ್ ಆಗಿದ್ದ ಕಾರಣದಿಂದಾಗಿ ಜನಸಂದಣಿ ರಸ್ತೆಗಳಲ್ಲಿ ಜೋರಾಗಿಯೇ ಇತ್ತು,

ಮಿಜೋರಾಂನಲ್ಲಿನ ಐಜ್ವಾಲ್ ಸಿಟಿ ಮಾರ್ಕೆಟ್ ಏರಿಯಾ ಅದು. ವಿಶಾಲವಾದ ಪ್ರದೇಶದಲ್ಲಿ ಜಿಂಕ ಶೀಟ್ ಷೆಡ್‌ಗಳಲ್ಲಿದ್ದವು ತರಹೇವಾರಿ ಅಂಗಡಿಗಳು. ಬರೀ ತರಕಾರಿ ಅಂಗಡಿಗಳಷ್ಟೇ ಅಲ್ಲ ...ದೈನಂದಿನ ಅವಶ್ಯಕತೆಯಿರುವ ಎಲ್ಲ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳಿದ್ದವು ಅಲ್ಲಿ.

“ಸಂಜೆ ಆರಕ್ಕೆ ಸರಿಯಾಗಿ ಅತ ನಿನ್ನನ್ನು ಭೇಟಿ ಯಾಗುತ್ತಾನೆ ಸನ್ ... ಮಾರ್ಕೆಟ್ ಏರಿಯಾದಲ್ಲಿ ಚಾಂದ್ನಿ ಬ್ಯಾಂಗಲ್ ಷಾಪ್ ಬಳಿ ಅನಸಿ [illegible]ಗಿ ವೈಟ್ ಮಾಡು....!”

ತನ್ನ ಬಾಸ್ ಕರ್ನಲ್ ದಿನೇಶ್‌ಕುಮಾರ್ ಹೇಳಿದ್ದ ಮಾತುಗಳು ಕಿವಿಯಲ್ಲಿ ಪ್ರತಿಧ್ವನಿಸಿದವು ಮಹೇಶನಿಗೆ.

ಲೆಕ್ಕಾಚಾರದಂತೆ ಡಾಕ್ಟೋರೀಕ್ ಆರು ಗಂಟೆಗೆ ಹಾಜರಾಗಬೇಕಲ್ಲ. ತಾನು ಕಾಯುತ್ತಿರುವ ದೊಡ್ಡ ಮನುಷ್ಯ. ಪಂಕ್ಚುಯಾಲಿಟಿಗೆ ಪ್ರಾಣ ಕೊಡುವ ಡಿಪಾರ್ಟ್‌ಮೆಂಟ್‌ನಲ್ಲಿರುವಾತ ಅವನು. ಸೋ.... ಖಂಡಿತಾ ಬಂದೇ ಬರುತ್ತಾನೆ.

ಆರು ದಾಟುತ್ತಿರುವ ಮುಳ್ಳನ್ನು ನೋಡುತ್ತಾ ತನ್ನಲ್ಲಿದ್ದ ಅನುಮಾನ ಗಳಿಗೆ ತಾನೇ ಸಮಾಧಾನ ಹೇಳಿಕೊಂಡ ಮಹೇಶ.

ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿದ ಮಿಜೋ ಗೃಹಿಣಿಯರು ಹ್ಯಾಂಡ್ ಬ್ಯಾಗ್‌ಗಳೊಡನೆ ಅಂಗಡಿಗಳ ಮುಂದೆ ನಿಂತು ಚೌಕಾಸಿ ನಡೆಸು ತ್ತಿದ್ದರು. ಕೆಲವರೊಡನೆ ಹೂವಿನ ಚಿತ್ತಾರ ಮಾಡಿರುವ ಸ್ವೆಟರ್‌ಗಳನ್ನು ಧರಿಸಿದ್ದ ಮುದ್ದು ಮಕ್ಕಳು ಕೂಡ ಇದ್ದರು.

ಅವರನ್ನೇ ನೋಡುತ್ತಾ ಇನ್ನರ್ಧ ಗಂಟೆ ಕಾಲಹರಣ ಮಾಡಿದ ಮೇಲೆ ಶುರುವಾಗಿತ್ತು ಮಹೇಶನ ಮನದಲ್ಲಿ ಸಣ್ಣಗೆ ಅಶಾಂತಿಯ ಹೊಗೆ. ಏನಾಗಿ ಹೋದ ತನ್ನನ್ನು ಭೇಟಿಯಾಗಬೇಕಾಗಿದ್ದ ವ್ಯಕ್ತಿ ? ಅವನ ಕಲೆತ ಹೊರತು ತಾನಿಲ್ಲಿ ಕೈ ಹಾಕಬೇಕಾದ ಕೆಲಸಕ್ಕೆ ಒಂದು ರೂಪ ಸಿಗದು.

ಸಿಗರೇಟ್ ಹತ್ತಿಸಿಕೊಂಡು ಎದೆಯ ತುಂಬಾ ಹೊಗೆ ಎಳೆದುಕೊಂಡ.

"ಏಯ್ ಹೈವಾನ್...ಕಣ್ಣು ಕಾಣುವುದಿಲ್ಲವೇ ? ಎಷ್ಟೊತ್ತು ನಿನ ದರಿದ್ರ ಅಂಗಡಿಯ ಮುಂದೆ ನಿಂತಿರಬೇಕು ?"

ಕರ್ಕಶ ಧ್ವನಿಯೊಂದು ಕೇಳಿ ಬಂದಾಗ ಅಯಾಚಿತವಾಗಿ ತಲೆ ತಿರುಗಿಸಿ ನೋಡಿದ ಮಹೇಶ.

ಬ್ಯಾಂಗಲ್ಸ್ ಷಾಪ್ ಪಕ್ಕದಲ್ಲೇ ಸಣ್ಣದೊಂದು ಗೂಡಿನಂತಹ ಅಂಗಡಿಯಿತ್ತು. ಸೀಮೆಎಣ್ಣೆ ಬುಡ್ಡಿಗಳನ್ನು ತಯಾರಿಸಿ ಮಾರುವ ಷಾಪ್

ಅದು. ಅದರ ಮುಂದೀಗ ನಿಂತಿದ್ದನೊಬ್ಬ ದೃಢಕಾಯ. ಬಲಿಷ್ಠ ಶರೀರ ಧರಿಸಿದ್ದ ಕಪ್ಪು ಒಟ್ಟಿಗಳ ಹಿಂದಿನಿಂದಲೂ ಕಾಣಬಹುದಿತ್ತು. ಮುಖ ನೋಡಿದರೇನೇ ರಫ್ ಕ್ಯಾರೆಕ್ಟರ್ ಎನ್ನಲಡ್ಡಿಯಿಲ್ಲ. ಅವನ ಹಿಂದೆ ನಿರ್ಲಕ್ಷ್ಯವಾಗಿ ಎಲೆ ಅಗಿಯುತ್ತಾ ಆಗಾಗ ಅಂಗಡಿಯ ಮುಂದೆಯೇ ತುಪುಕ್ಕನೆ ಉಗಿಯುತ್ತಾ ಇಬ್ಬರು ದೃಢಕಾಯರು ನಿಂತಿದ್ದರು ಬಾಡಿಗಳಂತೆಯೇ ತೋರುತ್ತಿದ್ದರು ಅವರು.

ಷಾಪ್‌ನೊಳಗೆ ಮುವ್ವತ್ತು ವರ್ಷಗಳ ಕೃಶಕಾಯದ ವ್ಯಕ್ತಿಯೊಬ್ಬ ಕೈ ಜೋಡಿಸಿ ಅಳು ಮುಖದೊಡನೆ ನಿಂತಿದ್ದ.

“ರೋನಿ ಸಾರ್ ! ದಯೆ ತೋರಿಸಿ ! ಈ ದಿನ ಇನ್ನು ಬೋಣಿಯೇ ಆಗಿಲ್ಲ. ಎರಡು ಮೂರು ಹಳೆಯ ಲಾಕೆಟ್ಟುಗಳನ್ನು ರಿಪೇರಿ ಮಾಡಿದ್ದಕ್ಕೆ ಐದು ರೂಪಾಯಿ ಬಂತು. ಅದನ್ನು ಮನೆಗೆ ತೆಗೆದುಕೊಂಡು ಹೋದರೇನೇ ನಾಲ್ಕು ಮಕ್ಕಳಿಗಷ್ಟು ಗಂಜಿ ಹಾಕಬಹುದು. ಇಲ್ಲದಿದ್ದರೆ ಎಲ್ಲರ ಹೊಟ್ಟೆಯ ಮೇಲೂ ತಣ್ಣೀರ ಬಟ್ಟೆ ಹಾಕಬೇಕಾದ ಪರಿಸ್ಥಿತಿ ಅದೊಂದು ದಿನ ಬಿಟ್ಟುಬಿಡಿ. ನಾಳೆ ನಿಮ್ಮ ಮಾಮೂಲು ಕೊಟ್ಟು ಬಿಡುತ್ತೇನೆ.”

ಪ್ರಾರ್ಥಿಸುತ್ತಿದ್ದ ಅವನು.

ರೋನಿ ಎಂಬ ಹೆಸರಿನ ರಫ್ ಕ್ಯಾರೆಕ್ಟರ್ ತನ್ನ ಪಕ್ಕದಲ್ಲೇ ಇದ್ದ ಚಂಚಾಗಳನ್ನು ಓರೆಗಣ್ಣಿಂದಲೇ ದಿಟ್ಟಿಸಿದ. ಇಬ್ಬರಲ್ಲೊಬ್ಬ ಮುಂದಕ್ಕೆಜ್ಜೆ ಇಟ್ಟ.

“ಇದೊಂದು ದಿನ ಉಪವಾಸವಿದ್ದರೆ ನಿನ್ನ ಮಕ್ಕಳೇನೂ ಸಾಯರೋ ದರ್ವೇಶಿ ! ಬಾಸ್‌ಗೆ ಕೊಡಬೇಕಾದ ಕಾಣಿಕೆ ಸಲ್ಲಿಸದಿದ್ದರೆ ನಿನ್ನ ಷಾಪ್ ಶೇಪ್ ಬದಲಾಗಿ ಬಿಡುತ್ತದೆ. ನಾಳೆಯಿಂದ ಸಿಟಿಯಲ್ಲಿ ಅಂಗಡಿ ಇಡಲಾಗದು. ಅರ್ಥವಾಯಿತೇ ?”

ವಾರ್ನಿಂಗ್ ಕೊಟ್ಟ.

"ಏಕೆ ಇಡುವಂತಿಲ್ಲ ? ನಾನು ಈ ಅಂಗಡಿಗೆ ಬಾಡಿಗೆ ಕೊಡುತ್ತಿದ್ದೇನೆ ಜೊತೆಗೆ ನಿಮಗೆ ಐದು ರೂಪಾಯಿಗಳ ಮಾಮೂಲಿ ಕೊಡುತ್ತಲೇ ಬಂದಿದ್ದೇನೆ. ನಮ್ಮಂತಹವರ ರಕ್ತ ಕುಡಿದು ದೇಹದ ಕೊಬ್ಬೆಚ್ಚಿಸಿಕೊಂಡಿರುವ ನೀವು ನಮಗೇ ಜುಲುಂ ಮಾಡಿ ಪ್ರಾಣ ತೆಗೆಯುವಿರಿ...."

ಅದೆಲ್ಲಿತ್ತೋ ಆಕ್ರೋಶ ಒಮ್ಮಿಂದೊಮ್ಮೆಲೇ ಒದರಿಬಿಟ್ಟ ಅಂಗಡಿ ಯಜಮಾನ.

ಹಂಟರ್‌ನಿಂದ ಹೊಡೆಸಿಕೊಂಡಂತೆ ಕೆಂಪಾಯಿತು ರೋನಿ ಮುಖ ಆ ಮಾತುಗಳಿಗೆ. ಎರಡನೇ ಅಸಿಸ್ಟೆಂಟ್ ಅಂತೂ ದೆವ್ವ ಹಿಡಿದವನಂತೆ ಅರಚುತ್ತಾ ಮುಂದಕ್ಕೆ ನೆಗೆದು ಓನರ್ ಷರ್ಟ್ ಹಿಡಿದು ಹೊರಕ್ಕೆಳೆದುಕೊಂಡ.

ಮಾರ್ಕೆಟ್ ವ್ಯಾಪಾರಿಗಳೆಲ್ಲಾ ಆ ಗಲಾಟೆ ಆದಾಗ ಗಮನಿಸದವರಂತೆ ಅತ್ತ ನೋಡಿ. ಅದಕ್ಕೂ ತಮಗೂ ಸಂಬಂಧವಿಲ್ಲದವರಂತೆ ಮುಖ ಪಕ್ಕಕ್ಕೆ ತಿರುಗಿಸಿಕೊಂಡರು.

"ಎಲೊ.... ಈಗೇಕೋ ಬೇಕೂಫ್ ಆ ಮಾತನಾಡಿದೆ ! ರೋನಿ ದಾದಾಗೇ ಎದಿರುತ್ತರ ಕೊಡುವಂತಹ ಘನಂದಾರಿ ಆಗಿಬಿಟ್ಟೆಯಾ ನೀನು ?"

ಅನ್ನುತ್ತಾ ಬಲಗೈ ಚಾಚಿ ರಪ್ಪನೊಡೆದ ಅಂಗಡಿ ಯಜಮಾನನ ಮುಖದ ಮೇಲೆ ರೋನಿಯ ಸೆಕೆಂಡ್ ಅಸಿಸ್ಟೆಂಟ್.

ಗಿರಗಿರ ತಿರುಗುತ್ತಾ ಬಂದು ಮಹೇಶನ ಮುಂದೆ ಬಿದ್ದ ಬುಡ್ಡಾ ಅಂಗಡಿ ಯಜಮಾನ.

ಗೋಳೋ ಎಂದು ಅಳುತ್ತಾ ಕೈಗೆ ಸಿಕ್ಕ ಮಹೇಶನ ಕಾಲುಗಳನ್ನು ಹಿಡಿದು ಬಿಟ್ಟ.

"ಕಾಪಾಡಿ ಸಾರ್... ಈ ರೌಡಿಗಳಿಂದ ನನ್ನನ್ನು ಕಾಪಾಡಿ ..."

ಬಿಕ್ಕುತ್ತಾ ಮನ ಮಿಡಿಯುವಂತೆ ಪ್ರಾರ್ಥಿಸತೊಡಗಿದ.

ಕಳವಳಗೊಂಡ ಮಹೇಶ. ಗಲಾಟೆ ಶುರುವಾಗುವ ಮೊದಲೇ ಅಲ್ಲಿಂದ ಜಾಗ ಖಾಲಿ ಮಾಡಿದರೊಳ್ಳೆಯದೆಂದುಕೊಂಡಿದ್ದರೂ ತಾನು ಅದನ್ನಂಟಿಸಿಕೊಳ್ಳದಿದ್ದರಾಯಿತು ಎಂದು ನಿಂತು ಬಿಟ್ಟಿದ್ದ. ಆದರೂ ಅನ್ಯಾಯವನ್ನು ಕಂಡಾಗ ನೋಡಿ ಸುಮ್ಮನಿರದ ತನ್ನ ಮನಸ್ಸು ತನ್ನನ್ನು ಕೆಣಕಿ ಮುನ್ನಡೆಯಲು ಪ್ರೇರೇಪಿಸಿದರೆ ನು ಮಾಡುವುದು ಎಂಬ ಅನುಮಾನವಿದ್ದೇ ಇತ್ತು. ಈಗ ಏನಾದರೊಂದು ನಿರ್ಧಾರಕ್ಕೆ ಬರಲೇಬೇಕಾದ ಪರಿಸ್ಥಿತಿ !

ವಿಕಟವಾಗಿ ನಗುತ್ತಾ ಮುಂದೆ ಬಂದರು ರೋಸಿ ಅಸಿಸ್ಟೆಂಟ್ಸ್.

"ಯಾವನೋ ಅವನು ನಿನ್ನನ್ನು ಕಾಪಾಡುವವನು ? ಇಡಿ ಐಜ್ವಾಲ್ ಸಿಟಿಯೊಳಗೆ ಟಾರ್ಚ್ ಹಾಕಿ ಹುಡುಕಿದರೂ ನಮ್ಮ ದಾದಾನಿಂದ ರಕ್ಷಿಸುವ ಗಂಡಸನ್ನು ನೀನು ಕಾಣಲಾಗದು. ಹೋಗು ... ಹೋಗಿ ದಾದಾ ಕಾಲು ಹಿಡಿದುಕೋ. ಅವರೊಬ್ಬರಿಗೆ ಮಾತ್ರ ನಿನ್ನನ್ನು ರಕ್ಷಿಸುವ ತಾಕತ್ತಿರುವುದು !"

ವ್ಯಂಗ್ಯ ಧ್ವನಿಯಲ್ಲಂದ ಒಬ್ಬ.

"ಯಾರೋ ದಾರಿಯಲ್ಲಿ ಹೋಗುವ ದಾಸಯ್ಯನನ್ನು ಹಿಡಿದೊಡನೆ ನಿನ್ನನ್ನ ಕಾಪಾಡುತ್ತಾನೆಂಬ ಭ್ರಮೆ ಇಟ್ಟುಕೊಳ್ಳಬೇಡವೋ ಮೂರ್ಖ ! ರೋನಿ ದಾದಾಗೆ ಸಡ್ಡು ಹೊಡೆಯಲು ಹಿಜಡಾಗಳಿಗೆಲ್ಲಾ ಸಾಧ್ಯವಾದೀತೇ ? ಆ ಕಾಲು ಬಿಟ್ಟು ದಾದಾ ಕಾಲು ಹಿಡಿದುಕೋ !"

ಎರಡನೆಯವನು ಮೊದಲಿನವನ ಮಾತಿಗೆ ಹಿಮ್ಮೇಳ ಹಾಕಿದ.

ಖಾರ ಅರೆದು ಹಚ್ಚಿದಂತೆ ಭಗ್ಗೆಂದಿತು ಮಹೇಶನ ಶರೀರ. ಅಯಾಚಿತವಾಗಿ ಬಿಗಿದಿದ್ದವು ಮುಷ್ಟಿಗಳು.

'ಹೋ' ಎಂದು ಅಳುತ್ತಲೇ ಮಹೇಶನ ಪಾದಗಳನ್ನು ಇನ್ನು ಬಿಗಿಯಾಗಿಡಿದ ಅಂಗಡಿ ಯಜಮಾನ.

'ನಿನಗೆ ಸಂಬಂಧವಿಲ್ಲದ ವಿಷಯದಲ್ಲಿ ತಲೆ ತೂರಿಸುವುದೇಕೆ ಬಾಸ್.... ಮರ್ಯಾದೆಯಾಗಿ ಇಲ್ಲಿಂದ ಜಾಗ ಖಾಲಿ ಮಾಡು !' ಸಲಹೆ ಕೊಟ್ಟಿತು ಅಂತರಾತ್ಮ.

'ಸಾರಿ ಫ್ರೆಂಡ್ ! ಇವರ ವ್ಯವಹಾರ ನೋಡುತ್ತಿದ್ದರೆ ಒಂದು ಕೈ ನೋಡೇ ಬಿಡುವಾ ಅನ್ನಿಸುತ್ತಿದೆ. ಹೀಗಿರುವಾಗ ನಿನ್ನ ಪುಕ್ಕಟೆ ಸಲಹೆಗಳ ಮೂಲಕ ತಲೆ ತೂರಿಸಲು ಬರಬೇಡ !' ಒರಟಾಗಿ ಅಂತರಾತ್ಮದ ಬಾಯಿ ಮುಚ್ಚಿ ಬುದ್ಧಿ ಅಂಗಡಿ ಯಜಮಾನನ ಭುಜ ಹಿಡಿದು ಮೇಲೆಬ್ಬಿಸಿದ ಮಹೇಶ.

"ನೀನೇನೂ ಭಯ ಪಡಬೇಡಣ್ಣಾ. ಈ ಹುಚ್ಚುನಾಯಿಗಳಿಂದ ನಿನಗೇನೂ ತೊಂದರೆಯಾಗುವುದಿಲ್ಲ" ಅಂದ.

"ಗುಂಯ್ !" ಮಹೇಶನ ಮಾತುಗಳು ಕಿವಿಗೆ ಬಿದ್ದೊಡನೆ ಟೊಮ್ಯಾಟೊಗಿಂತಲೂ ಕೆಂಪಾಯಿತು ರೋನಿ ಮುಖ.

"ಯಾರೋ ನೀನು ? ಐಜ್ಯಾಲ್ ಸಿಟಿಗೆ ಹೊಸಬನಂತೆ ಕಾಣುತ್ತಿರುವೆ. ಮನೇಲಿ ಹೇಳಿ ಬಂದಿರುವೆಯಾ ? ದಾದಾ ಅನುಚರರನ್ನು ಇದುವರೆಗ್ಯಾರೂ ಹುಚ್ಚು ನಾಯಿಗಳೆಂದ ನಿದರ್ಶನವೇ ಇಲ್ಲ !"

ಗುಟುರು ಹಾಕುತ್ತಾ ಮಹೇಶನ ಕಡೆಗೆ ಓಡಿ ಬಂದ ಒಬ್ಬ ಅಸಿಸ್ಟೆಂಟ್.

ಅವನಿಗುತ್ತರ ಮಾತಿನ ಮೂಲಕ ಕೊಡಲಿಲ್ಲ ಮಹೇಶ. ಮುಷ್ಟಿ ಬಿಗಿದು ಮೇಲೇರಿ ಬಂದ ರೋನಿ ಅನುಚರನ ದಾರಿಯಿಂದ ನೀಟಾಗಿ ಪಕ್ಕಕ್ಕೆ ಸ್ರಿಗ ಆಗಿ ಬಲವಾಗೊಂದು ಪಂಚ್ ಮಾಡಿದ.

ವಿಕೃತವಾಗಿ ಚೀರಿ ಅಂಗಾತಾಗಿ ಬಿದ್ದುಬಿಟ್ಟ ಅಸಿಸ್ಟೆಂಟ್.

"ಬಲವಿಲ್ಲದವರ ಮೇಲೆ ಬಲಪ್ರದರ್ಶನ ಮಾಡುವುದು ಗಂಡಸ್ತನ ವೆನಿಸಿಕೊಳ್ಳದು ಫ್ರೆಂಡ್ಸ್! ತಾಕತ್ತಿದ್ದರೆ ಅದನ್ನೆಲ್ಲಾ ನನ್ನ ಮೇಲೆ ಪ್ರದರ್ಶಿಸಿ ನೋಡೋಣ!"

ಕೈ ಉಜ್ಜಿಕೊಳ್ಳುತ್ತಾ ಸಜೆಸ್ಟ್ ಮಾಡಿದ ಮಹೇಶ.

ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ ಮುಂದಕ್ಕೆಜ್ಜೆಯಿಡಹೋದ ರೋನಿ. ಅವನಿಗಡ್ಡ ಬಂದ ಎರಡನೇ ಶಿಷ್ಯ.

"ನೀವೇಕೆ ದಾದಾ ಆ ಇಲಿಯ ಹಿಸುಕಿ ಹಾಕಲು ನಾನೊಬ್ಬ ಸಾಕು!"

ಎಂದವನನ್ನು ತಡೆದು ಮಹೇಶನ ಕಡೆಗೆ ಬಂದ.

ರೊಟೀನ್ ಆಗಿ ನಡೆಯುವ ಘಟನೆಗಳ ಬದಲು ಪರಿಸ್ಥಿತಿ ಬೇರೊಂದು ರೀತಿಯ ಟ್ವಿಸ್ಟ್ ತೆಗೆದುಕೊಂಡಿದ್ದಕ್ಕೆ ಜನರೂ ಸಹ ಗುಂಪುಗೂಡಿದರು.

ಆಟೋಮ್ಯಾಟಿಕ್ಕಾಗಿ ಫೈಟಿಂಗ್ ಸೆನ್ಸ್‌ನಲ್ಲಿದ್ದ ಮಹೇಶನ ಅವಯವಗಳು ಅವಶ್ಯಕ್ಕವೇ ಅಫೆನ್ಸಿವ್ ಮೂವ್‌ಮೆಂಟ್ ಪ್ರದರ್ಶಿಸಿದ್ದವು.

ಫಟ್.... ಫಟಾರ್....

ಏನೋ ಕಿತ್ತು ನಾಟು ಹಾಕುವವನಂತೆ ಮೇಲೇರಿ ಬಂದ ರೋನಿಯ ಎರಡನೇ ಶಿಷ್ಯ ಸಾಲಿಡ್ ಪಂಚ್‌ಗಳಿಂದಾಗಿ ಕಕ್ಕಾಬಿಕ್ಕಿಯಾಗಿಬಿಟ್ಟ. ತನ್ನ ಮುಷ್ಠಿಯನ್ನೊಂದಿಂಚಾದರೂ ಮುಂದಕ್ಕೆ ಮೂವ್ ಆಗುವ ಮೊದಲೇ ಕಬ್ಬಿಣದ ಗುಂಡುಗಳಂತೆ ಸೋಕಿದ ಮಹೇಶನ ಬಿಗಿ ಮುಷ್ಟಿಗಳಿಂದಾಗಿ ಚಿತ್ರವಾಗಿ ಕಿರುಚಿ ಹಿಂದಕ್ಕೆಗರಿ ಬಿದ್ದ.

ತಟಕ್ಕನೆ ಮುಂದೆ ಬಗ್ಗಿ ಅವನೆರಡು ಕೈ ಎರಡು ಕಾಲುಗಳನ್ನಿಡಿದು ಅಲಕ್ಕಾಗಿ ಮೇಲೆತ್ತಿ ಗಿರಗಿರನೆ ತಿರುಗಿಸಿ ತನಗಿಷ್ಟ ಬಂದ ದಿಕ್ಕಿನ ಕಡೆಗೆಸೆದು ಬಿಟ್ಟ ಮಹೇಶ.

“ಅಯ್ಯೋ... ಅಯ್ಯಯ್ಯೋ....” ಚೀರಾಡುತ್ತಾ ಸರ್ವ್ ಮಾಡಿದ ವಾಲಿಬಾಲ್‌ನಂತೆ ಹೋಗಿ ಮರದ ಬೋರ್ಡೊಂದಕ್ಕೆ ಡಿಕ್ಕಿ ಹೊಡೆದ ಅಸಿಸ್ಟೆಂಟ್. ಫಳಫಳನೆ ಒಡೆದು ಪೀಸ್ ಪೀಸಾಯಿತು ಬೋರ್ಡ್. ಅದರೊಡನೆಯೇ ಮುಪ್ಪೆಯಂತಾಗಿ ನೆಲಕ್ಕುರುಳಿದ ಅಸಿಸ್ಟೆಂಟ್.

ರಕ್ತವೆಲ್ಲಾ ಇಂಗಿ ಹೋದಂತೆ ಬಿಳುಪೇರಿತು ರೋನಿದಾವನ ಮುಖ.

"ಹಲೋ ಮಿಸ್ಟರ್ ರೋನಿದಾದ... ಹೇಗಿದೆ ನಮ್ಮ ಕೈಚಳಕ ?”

ನಗುತ್ತಾ ಅವನ ಒಪಿನಿಯನ್ ಕೇಳಿದ ಮಹೇಶ.

ಮುನ್ನಾಸೆಗಿಂತಲೂ ಜೋರಾಗಿ ಘೀಳಿಡುತ್ತಾ ಮಹೇಶನತ್ತ ನುಗ್ಗಿ ಬಂದ ರೋನಿದಾದಾ. ಮರದ ಕೊಂಬೆಗಳಂತಿದ್ದ ಅವನ ಕೈಗಳನ್ನು ಮಧ್ಯದಲ್ಲೇ ಬ್ಲಾಕ್ ಮಾಡಿದ ಮಹೇಶ ತಲೆಬಗ್ಗಿಸಿ ಅವನೆದೆಗೆ ಕೊಬ್ಬಿದ ಟಗರಿನಂತೆ ಗಟ್ಟಿಸಿದ.

ನೋವಿಗೆ ಹಾಹಾಕಾರವೆಸಗಿದ ರೋನಿ. ರಕ್ತದ ತೊಟ್ಟೊಂದು ಅವನ ಮೇಲ್ತುಟಿಯ ಮೇಲೆ ಪ್ರತ್ಯಕ್ಷವಾಯಿತು.

ಹಾಗೆಯೇ ಬಿಗಿದ ಮುಷ್ಟಿಗಳನ್ನು ಅವನ ಕಿಬ್ಬೊಟ್ಟೆಯ ಮೇಲಿಳಿಸಿದ ಮಹೇಶ.

ಅಸಹನೀಯ ಯಾತನೆಗೆ ಹುಚ್ಚಿಡಿದಂತಾಯಿತು ರೋನಿಗೆ. ಎರಡು ಬಾಟಲ್ ರಂ ಕುಡಿದವನಂತೆ ತೂರಾಡುತ್ತಾ ಹಿಂದಿಂದಕ್ಕೆ ಹೆಜ್ಜೆಯಿಟ್ಟ.

ಅವನ ಷರ್ಟ್ ಎರಡೂ ಕೈಗಳಲ್ಲಿಡಿದು ಬಲವಾಗಿ ಷೇಕ್ ಮಾಡಿ ಜೋರಾಗಿ ತಳ್ಳಿಬಿಟ್ಟ ಮಹೇಶ !

ಸುಂಟರಗಾಳಿಯಂತೆ ಸುತ್ತುತ್ತಾ ಹೋಗಿ ಒಂದೆಡೆ ಧೊಪ್ಪನೆ ನೆಲಕ್ಕೆ ಬಿದ್ದ ರೋನಿ ದಾದಾ.

ಒಂದೇ ಹೆಜ್ಜೆಯಲ್ಲಿ ಅವನ ಮುಂದೋಗಿ ನಿಂತ ಮಹೇಶ.

"ಸ್ವಲ್ಪ ನಯ, ನಾಜೂಕಿನೊಡನೆ ಮರ್ಯಾದೆಯಾಗಿ ಬದುಕುವುದನ್ನು ಕಲಿತುಕೋ. ಇನ್ನೊಂದಾದರೂ ದಾದಾಗಿರಿ ಪ್ರದರ್ಶಿಸಲು ಪ್ರಯತ್ನಿಸಿದರೆ ಮೂಳೆ ಮುರಿದು ಮೂಟೆಗಟ್ಟಿ ನಿನ್ನ ತಲೆಯ ಮೇಲೇ ಹೊರಿಸುತ್ತೇನೆ."

ಅನತಿ ದೂರದಲ್ಲಿ ಸ್ವರವಾಗಲೇ ಜೋರಾಗಿ ಕೇಳಿ ಬಂದಿದ್ದವು ಸೈರನ್‌ಗಳು.

"ಪೋಲೀಸ್....ಪೋಲೀಸರು ಬರುತ್ತಿದ್ದಾರೆ....!"

ಜೋರಾಗಿ ಕೂಗುತ್ತಾ ಅಕ್ಕಪಕ್ಕ ಓಡಿಬಿಟ್ಟರು ಗುಂಪುಗೂಡಿದ್ದ ಜನ

ತಟಕ್ಕನೆ ಇಳಿದು ಹೋಗಿತ್ತು ಮಹೇಶನ ಆವೇಶ. ಮಿಜೋರಾಂ ಪೋಲೀಸರ ಕೈನಲ್ಲಿ ಸಿಕ್ಕಿ ಬೀಳುವುದಕ್ಕಿಂತಾ ದರಿದ್ರ ಕೆಲಸ ಇನ್ನೊಂದಿಲ್ಲ ಈಗ.

ಕಂಗಾಲಾಗಿ ಹಿಂದಕ್ಕೆ ತಿರುಗಿ ತಾನೂ ಜನರ ನಡುವೆ ನುಗ್ಗಿದ ಮಹೇಶ. ಪೋಲೀಸರ ಹೆಸರು ಕೇಳಿದೊಡನೆ ಜನರಲ್ಲಿ ಭೀತಿ ಮೂಡಿ ತಲೆ ಮರೆಸಿಕೊಳ್ಳುವ ತವಕದೊಡನಿದ್ದರು. ಆದ್ದರಿಂದ ಮಹೇಶನ ಬಗ್ಗೆ ತಲೆ ಕೆಡಿಸಿಕೊಳ್ಳುವರ್‍ಯಾರೂ ಇರಲಿಲ್ಲ.

ಅಂಗಡಿಗಳ ಹಿಂಬದಿಗೆ ದೌಡಾಯಿಸಿದ್ದ ಮಹೇಶ. ಅಲ್ಲಿಂದ ಮೈನ್ ರೋಡ್ ತಲುಪಲು ಹಲವಾರು ಗಲ್ಲಿಗಳಿದ್ದವು. ಒಂದರಲ್ಲಿ ತೂರಿ ಮುಂದಕ್ಕೆ ನಡೆದ ಮೈನ್ ರೋಡಿನ ಮೇಲೆ ಕಾಲಿಟ್ಟಾಗ ನಿರಾಳ ಮನಸ್ಸಿನೊಡನೆ ಒಂದು ಪೆಟ್ಟಿಗೆ ಅಂಗಡಿಯ ಮುಂದೆ ನಿಂತು ಸಿಗರೇಟ್ ಪ್ಯಾಕ್ ಕೊಂಡು ಒಂದು ಸಿಗರೇಟ್ ಹಚ್ಚಿಕೊಂಡ.

ಅಷ್ಟೊತ್ತಿಗೆ ಆರು ಗಂಟೆಯಾಗಿದ್ದ ಕಾರಣ ಬೀದಿ ದೀಪಗಳು ಹತ್ತಿ ಕೊಂಡಿದ್ದವು. ಅಂಗಡಿ ಳಲ್ಲೂ ಒಂದೊಂದು ಲೈಟ್‌ಗಳು ಆನ್ ಆಗ ತೊಡಗಿದ್ದವು.

ಸಿಗರೇಟ್ ಸೇದುತ್ತಾ ರಸ್ತೆಗಿಳಿದ ಮಹೇಶ. ತನ್ನನ್ನು ಮೀಟ್ ಮಾಡಬೇಕಾಗಿದ್ದ ವ್ಯಕ್ತಿ ಯಾವ ಕಾರಣದಿಂದಲೋ ಮಿಸ್ಸಾಗಿದ್ದಾನೆ. ಆಕ ಸ್ಮಾತ್ತಾಗಿ ಅವನು ತನ್ನನ್ನು ಮಾರ್ಕೆಟ್ ಏರಿಯಾದಲ್ಲಿ ಭೇಟಿಯಾಗುವ ದಿದ್ದರೆ ತಾನು ಮುಂದೆ ಮಾಡಬೇಕಾಗಿರುವ ಕೆಲಸವೇನೆಂದು ಜ್ಞಾಪಿಸಿ ಕೊಳ್ಳುತ್ತಾ ಟ್ಯಾಕ್ಸಿಯೊಂದನ್ನು ನಿಲ್ಲಿಸಿ ಹತ್ತಿ ಕುಳಿತು ಎಲ್ಲಿಗೆ ಹೋಗ ಬೇಕೆಂದು ಚಾಲಕನಿಗೆ ತಿಳಿಸಿದ.

ಕಾಲು ಗಂಟೆಯಲ್ಲಿ ಡೆಸ್ಟಿನೇಷನ್ ರೀಚಾಯಿತು ಟ್ಯಾಕ್ಸಿ. ಫೇರ್ ಸಲ್ಲಿಸಿ ಮುನ್ನಡೆಯಲು ಶುರು ಮಾಡಿದ. ನಾಲ್ಕೈದು ರಸ್ತೆಗಳನ್ನು ಕ್ರಾಸ್ ಮಾಡಿ ಐದು ನಿಮಿಷಗಳ ನಂತರ ಒಂದು ಮಸೀದಿಯನ್ನು ಸಮೀಪಿಸಿದ.

ಅದು ಮುಸ್ಲಿಮರೇ ಹೆಚ್ಚಿಗೆ ವಾಸಿಸುವ ಸ್ಲಂ ಏರಿಯಾ. ಹಳೆಯ ಕಾಲದ ಹೆಂಚಿನ ಮನೆಗಳು, ಕುಸಿದು ಬೀಳುವ ಘಟ್ಟಗಳನ್ನು ತಲುಪಿದ್ದ ಕಲ್ಲಿನ ಗೋಡೆಗಳ ಬಂಗಲೆಗಳೊಡನೆ ಬೇರ್ಯಾವುದೋ ಲೋಕದಂತೆ ತೋರು ತ್ತಿತ್ತು ಆ ಏರಿಯಾ.

ಮಸೀದಿಯ ಮುಂದೆ ನಿಂತು ಕಣ್ಣಿನಿಂದಲೇ ಮುಂದಿರುವ ಮನೆ ಗಳನ್ನು ಲೆಕ್ಕ ಹಾಕಿ ಒಂದು ಮನೆಯ ಮೇಲೆ ನೋಟ ನಿಲ್ಲಿಸಿದ ಮಹೇಶ. ಹಳೆಯ ಬಂಗಲೆಯೊಂದರ ಚಿಕ್ಕ ಪೋರ್ಷನ್ ಅದು. ಕತ್ತಲು ತುಂಬಿತ್ತು ಆ ಪೋರ್ಷನ್‌ನಲ್ಲೀಗ.

ಸಿಗರೇಟ್ ಕೆಳಗೆಸೆದು ಅತ್ತ ಕಡೆಗೆ ಹೆಜ್ಜೆ ಹಾಕಿದ ಮಹೇಶ. ಸರಿ ಯಾಗಿ ಪೋರ್ಷನ್ ಮುಂದಕ್ಕೆ ಬಂದಾಗ ದಪ್ಪ ಬೀಗವೊಂದರ ದರ್ಶನ ವಾಗಿತ್ತು. ಮೇಲೇರಿದ್ದವು ಅವನ ಹುಬ್ಬುಗಳು.

ಬಾಗಿಲ ಪಕ್ಕದಲ್ಲಿದ್ದ ಕಿಟಕಿ ಬಾಗಿಲುಗಳೂ ಸಹ ಕ್ಲೋಸ್ ಆಗಿದ್ದವು. ಬಾಗಿಲ ಮೇಲೆ ಸಣ್ಣದೊಂದು ನೇಮ್ ಪ್ಲೇಟ ಇತ್ತು.

'ಕರನ್–ಫೋಟೋಗ್ರಾಫರ್'

ಬಿಳಿಯ ಅಕ್ಷರಗಳು ಇಂಗ್ಲೀಷ್‌ನಲ್ಲಿದ್ದು ಸ್ಪಷ್ಟವಾಗಿ ಓದಬಹುದಿತ್ತು.

ತಾನು ಬೇರೊಂದು ಮನೆಗೆ ಬಂದು ಬಿಟ್ಟೆನೇ ಎಂಬ ಅನುಮಾನ ಆ ಬೋರ್ಡ್‌ನಲ್ಲಿದ್ದ ಹೆಸರು ಓದಿದ ಮೇಲೆ ಮಾಯವಾಗಿತ್ತು ಮಹೇಶನಿಗೆ. ಅದು ತನಗೇನೇ ಕಾದಿರುವ ವ್ಯಕ್ತಿಯ ಮನೆ ಕರ್ನಲ್ ಹೇಳಿದ್ದ ಮಾತುಗಳು ಅವನ ಕಿವಿಯಲ್ಲಿ ತಟಕ್ಕನೆ ಮೊಳಗಿದವು.

"ಕರನ್ ನಿನ್ನನ್ನು ಮಾರ್ಕೆಟ್ ಏರಿಯಾದಲ್ಲಿ ಖಂಡಿತಾ ಭೇಟಿಯಾಗುತ್ತಾನೆ ಸನ್ ! ಬೈ ಚಾನ್ಸ್ ಅವನಿಗೆ ನಮ್ಮ ಮೆಸ್ಸೇಜ್ ಸಮಯಕ್ಕೆ ಸಿಗದೆ ಬರದಿದ್ದಲ್ಲಿ ಮಾತ್ರ ನೀನೇ ಅವನ ಮನೆಗೆ ಹೋಗು."

ಬೀಗ ಹಾಕಿದ್ದ ಬಾಗಿಲನ್ನು ನೋಡಿ ಹಿಂದಕ್ಕೆ ತಿರುಗುತ್ತಿದ್ದಾಗ ಪಕ್ಕದ ಪೋರ್ಷನ್ ಬಾಗಿಲು ತೆರೆದುಕೊಂಡಿತ್ತು. ಕನ್ನಡಕ ಸರಿಪಡಿಸಿ ಕೊಳ್ಳುತ್ತಾ ಹೊರ ಬಂದನೊಬ್ಬ ಮಧ್ಯ ವಯಸ್ಕ. "ಯಾರು ?" ಕೇಳಿದ.

ಯಾವುದೋ ದೂರದಾಸೆ ಕುದುರಿ ಅವನ ಬಳಿಗೆ ನಡೆದ ಮಹೇಶ.

"ಗುಡ್ ಈವಿನಿಂಗ್ ಸಾರ್ !"

ವಿನಂತಿಯುದೊಡನಂದ ಮಹೇಶನನ್ನು ಮೇಲಿಂದ ಕೆಳಗೆ ನೋಡಿ ಅಯಾಚಿತವಾಗಿ ತಲೆ ಕುಣಿಸಿದ ಆ ವ್ಯಕ್ತಿ.

"ಯಾ.ರು ಬೇಕು ?" ಕೇಳಿದ.

"ನಿಮ್ಮ ಪಕ್ಕದ ಪೋರ್ಷನ್‌ನಲ್ಲಿರುವಾತ ನನ್ನ ಸ್ನೇಹಿತ. ಅವನ ನೋಡಲೆಂದು ಬಂದೆ. ಆದರೆ ಅವನಿಲ್ಲ. ಎಲ್ಲಿ ಹೋದ ಎಂದೇನಾದರೂ ಗೊತ್ತೇ ?"

ಕೇಳಿದ ಮಹೇಶ.

"ಗೊತ್ತಿಲ್ಲ ಸಾರ್. ಅವನು ವೃತ್ತಿಯಿಂದ ಫೋಟೋಗ್ರಾಫರ್ ಎಂದು ಮಾತ್ರ ಗೊತ್ತು. ಭುಜದಲ್ಲೊಂದು ಕ್ಯಾಮೆರಾ ಸಿಗಿಸಿಕೊಂಡು ಹೊತ್ತು ಗೊತ್ತಿನ ಪರಿವೆಯಿಲ್ಲದೆ ಬಂದು ಹೋಗುತ್ತಿರುತ್ತಾನೆ. ಯಾವಾಗ ಬಂದ ಎಂಬುದೇ ತಿಳಿಯುವುದಿಲ್ಲ." ಹೇಳಿದನಾತ.

ನಿರುತ್ಸಾಹ ಮುಖದ ಮೇಲೆ ತೋರಗೊಡದೆ ಜಾಗ್ರತೆ ವಹಿಸಿ ಅವನಿಗೆ ವಂದನೆಗಳನ್ನರ್ಪಿಸಿ ಹಿಂದಕ್ಕೆ ತಿರುಗಿದ ಮಹೇಶ.

ಮಸೀದಿಯೊಳಗಿದ್ದ ಫಕೀರನ್ಯಾರೋ ಉರ್ದು ತತ್ವಗಳ ರಾಗಯುಕ್ತವಾಗಿ ಹಾಡುತ್ತಿದ್ದ. ಮಸೀದಿಯ ಬದಿಗೆ ಬಂದು ಅಲ್ಲೇ ಕಟ್ಟಿದ್ದ ಜಗ್ಲಿಯ ಮೇಲೆ ಕುಕ್ಕರಿಸಿದ ಮಹೇಶ.

ಅರ್ಥವಾಗದ ಆತಂಕವ್ಯಾವುದೋ ಪದೇ ಪದೇ ಮನಸ್ಸಿನಲ್ಲಿ ಪ್ರಕಟಗೊಳ್ಳುತ್ತಾ ಅವನನ್ನು ಕಳವಳಕ್ಕೀಡು ಮಾಡುತ್ತಿತ್ತು. ನಡೆಯಬಾರದ್ದೇನೋ ನಡೆದು ಹೋಗಿದೆ ಎಂಬ ಭಾವನೆ ಅವನ ಟೆನ್ಷನ್ ಹೆಚ್ಚಿಸುತ್ತಿತ್ತು. ಒಂದರ ಹಿಂದೊಂದರಂತೆ ಎರಡು ಸಿಗರೇಟ್ ಸೇದಿದ ಮೇಲೆ ಒಂದು ನಿರ್ಧಾರಕ್ಕೆ ಬಂದ ಅವನು ಕರ್ರ ಇಲ್ಲದಿದ್ದರೇನು....ತಾನೇ ಅವನ ಪೋರ್ಷನ್ ಚೆಕ್ ಮಾಡಿದರೆ ಏನಾದರೂ ವಿವರಗಳು ಸಿಗಬಹುದೇನೋ....!"

ಕೊನೆಯವರೆಗೆ ಉರಿದ ಸಿಗರೇಟು ಕೆಳಗೆ ಹಾಕಿ ಹೊಸಕಿ ಆ ಗಲ್ಲಿಯನ್ನೊಮ್ಮೆ ಪರಿಶೀಲಿಸಿದ. ಆಗಾಗ ಕಣ್ಣಿಗೆ ಒಬ್ಬರೋ ಇಬ್ಬರಂತೆ ಜನ ಕಣ್ಣಿಗೆ ಬೀಳುತ್ತಿದ್ದರಷ್ಟೇ. ಬೆಳಗುತ್ತಿರುವ ಬೀದಿ ದೀಪಗಳಿಗೆ ಬೂಸ್ಟ್ನ,

ಕೊಳೆ ಹಿಡಿದು ಕ್ಷೀಣ ಬೆಳಕು ಪಸರಿಸುತ್ತಿದ್ದವಷ್ಟೇ ಈಗ ಕತ್ತಲೆ ಆದ್ದರಿಂದ ಮುಕ್ಕಾಲು ಗಲ್ಲಿಯಲ್ಲಿ ಕತ್ತಲೆಯೆಂದೇ ದರ್ಬಾರು.

ಕರ್ರ ಪೋರ್ಷನ್‌ಗೆ ಹಾಕಿರುವ ಬೀಗವನ್ನು ಜ್ಞಾಪಕಕ್ಕೆ ತಂದು ಕೊಳ್ಳುತ್ತಾ ಷೂ ಲೇಸ್ ಕಟ್ಟುತ್ತಿರುವವನಂತೆ ನಟಿಸುತ್ತಾ ಬಲಗಾಲ ಷೂ ಸೋಲ್ ಬಿಗಿಯಾಗಿಡಿದು ಒಂದು ಸಲ ಪ್ರೆಸ್ಟ್ ಮಾಡಿದ ಮಹೇಶ. ಸಣ್ಣ ಕಂಬಿಗಳಿರುವ ಚಿಕ್ಕರಿಂಗ್ ಜಾರಿ ಬಿತ್ತು ಅವನ ಅಂಗೈನೊಳಗೆ. ಸೋಲ್ ಯಥಾಸ್ಥಿತಿಗೆ ತಂದು ಕಂಬಿಗಳಿದ್ದ ರಿಂಗ್ ಮುಷ್ಠಿಯಲ್ಲಿ ಬಿಗಿಯಾಗಿಡಿದು ನಿಧಾನವಾಗಿ ಮುಂದಕ್ಕೆ ನಡೆಯ ತೊಡಗಿದ.

ಗಲ್ಲಿ ಕ್ರಾಸ್ ಮಾಡಿ ಕರ್ರ ಪೋರ್ಷನ್ ಸಮೀಪಿಸಿದ. ಪಕ್ಕದ ಪೋರ್ಷನ್‌ನಲ್ಲಿ ಲೈಟ್ಸ್ ಬೆಳಗುತ್ತಿದ್ದವು. ಬಾಗಿಲು ಮುಚ್ಚಿತ್ತು.

ಗಲ್ಲಿಯಲ್ಲಿ ಯಾರೂ ಇಲ್ಲವೆಂದು ಗ್ಯಾರಂಟಿಯಾದ ಮೇಲೆ ಬೀಗದ ಮೇಲೆ ಕೈ ಹಾಕಿದ ಮಹೇಶ. ಸೆಲ್ ಸ್ಪೆಷಲ್ ಎಫೆಕ್ಟ್ಸ್ ವಿಂಗ್ ಕಿಲ್ ಮಾಸ್ಟರ್‌ಗೆಂದೇ ವಿಶೇಷವಾಗಿ ನಿರ್ಮಿಸಿದ್ದ ಮಾಸ್ಟರ್ ಸ್ಕೇರಿಟೀ ಕೇಸ್ ಅವು. ಎಂತಹ ಬೀಗವಾದರೂ ಈ ಕೇಸ್‌ಗೆ ಸೆಲ್ಯೂಟ್ ಹೊಡೆದು ಶರ ಣಾಗಬೇಕು !

ತಾನು ಹೀಗೆ ಆ ಬೀಗ ತೆರೆಯುವುದನ್ನು ಬೇರ್‍ಯಾರಾದರೂ ನೋಡಿದರೆ ಏನಾಗುತ್ತದೆಂದು ಚೆನ್ನಾಗಿ ಗೊತ್ತು ಮಹೇಶನಿಗೆ. ಕಾಲುಗಳು ಸೋಲು ವವರೆಗೆ ಫುಟ್‌ಬಾಲ್ ಆಡಿ ಆಮೇಲೆ ಪೋಲೀಸ್ ಸ್ಟೇಷ ತಲುಪಿಸುತ್ತಾರೆ ! ಕಳ್ಳತನ ಮಾಡಲು ಬಂದಿರುವವನೆಂದೇ ಎಲ್ಲರೂ ತೀರ್ಮಾನಕ್ಕೆ ಬರುವುದ ರಲ್ಲಿ ಸಂಶಯವಿಲ್ಲ. ಕಳ್ಳರಿಗೆ ಅದಕ್ಕಿಂತಾ ಹೆಚ್ಚಿಗೆ ಮರ್ಯಾದೆ ಸಿಕ್ಕಲು ಸಾಧ್ಯವೇ ?

ಒಂದೂವರೆ ನಿಮಿಷಗಳ ಪ್ರಯತ್ನದ ನಂತರ ಬೀಗ ಕಳಚಿಕೊಂಡು ಅವನ ಕೈಗೆ ಬಂದಿತ್ತು. ಸರ್ರನೆ ಚಿಲಕ ತೆಗೆದು ಒಳಕ್ಕೆ ತೂರಿ ಬಾಗಿಲು ಮುಚ್ಚಿಕೊಂಡ.

ಒಳಗಿನ ಚಿಲಕ ಹಾಕುತ್ತಿರುವಾಗ ಕಣ್ಣಾಗೇನೋ ವಾಸನೆ ಮೂಗಿಗೆ ಸೋಕಿತು. ಲೈಟ್ ಹಾಕಬೇಕೆಂದು ಸ್ವಿಚ್ ಹುಡುಕ ಹೋದವನು ಏಕ್‌ದಂ ಆ ಪ್ರಯತ್ನಕ್ಕೆ ತಡೆ ಹಾಕಿಕೊಂಡ ಮಹೇಶ. ಜೇಬಿನಿಂದ ಸಿಗರೇಟ್ ಲೈಟರ್ ತೆಗೆದು ಹತ್ತಿಸಿದ.

ಆ ಕಿರು ಬೆಳಕಲ್ಲೇ ಕರೆಗಟ್ಟಿದ ಗೋಡೆಗಳ ಹಾಲೊಂದು ಪ್ರತ್ಯಕ್ಷವಾಗಿತ್ತು ಅವನ ಮುಂದೆ. ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಹಲವಾರು ಪತ್ರಿಕೆಗಳು, ಅಲ್ಲಲ್ಲಿ ದಾರಿಗಡ್ಡ ಸಿಗುತ್ತಿದ್ದ ಫರ್ನಿಚರ್‌ಗಳನ್ನು ದಾಟಿಕೊಂಡು ಹಾಲೆಲ್ಲಾ ಒಂದು ರೌಂಡ್ ಬಂದ ಮಹೇಶ. ಅಯಾಚಿತವಾಗಿ ಅವನ ನೋಟ ಟೇಬಲ್ ಅಂಚಿನಲ್ಲಿ ಒಂದೆಡೆ ಕಾಣಿಸಿದ ಕೆಂಪು ಕಲೆಯ ಮೇಲೆ ಬಿತ್ತು.

ಅಷ್ಟು ಬೆಳಕಲ್ಲೇ ಆ ಕರೆ ಯಾವುದರಿಂದುಂಟಾಯಿತೆಂದು ಗ್ರಹಿಸಿ ಬಿಟ್ಟಿದ್ದ ಮಹೇಶ. ರಕ್ತದ ಕರೆ !

ಆಂದೋಳನೆಯೊಡನೆ ಟೇಬಲ್ ಕಡೆಗೆ ನಡೆದ ಅವನು. ಅಲ್ಲಿಂದ ನೆಲದ ಮೇಲೂ ಬಿದ್ದಿದ್ದವು ಎರಡು ಮೂರು ತೊಟ್ಟುಗಳು. ಅವನ್ನು ಹಿಂಬಾಲಿಸಿ ಬೆಡ್‌ರೂಂನೊಳಕ್ಕೆ ಕಾಲಿಟ್ಟ ಅವನ ಕಣ್ಣುಗಳು ಅಯಾಚಿತವಾಗಿ ಸ್ಪ್ರೆಡ್ ಆಗಿದ್ದವು.

ಬೆಡ ರೂಂನಲ್ಲಿನ ಮಂಚದ ಮೇಲೆ ಅಸ್ತವ್ಯಸ್ತವಾಗಿ ಮುಕ್ಕಡೆ ಬಿದ್ದಿದ್ದ ವ್ಯಕ್ತಿಯೊಬ್ಬನ ಬೆನ್ನಿನ ಮೇಲೆ ರಕ್ತ ಹೆಪ್ಪುಗಟ್ಟಿ ಮಿನುಗುತ್ತಿತ್ತು.

ಒಂದೇ ಹಾರಿನಲ್ಲಿ ಆ ವ್ಯಕ್ತಿಯನ್ನು ಸಮೀಪಿಸಿದ ಮಹೇಶ ಪರೀಕ್ಷಿಸಿ ನೋಡುವ ಆಗತ್ಯವಿಲ್ಲದೇನೇ ಅರಿತು ಬಿಟ್ಟಿದ್ದ....ಆ ವ್ಯಕ್ತಿ ಸತ್ತು ಹೋಗಿದ್ದಾನೆಂದು !

ಮೆಲ್ಲಗೆ ಬಾಡಿಯನ್ನು ಅಂಗಾತಾಗಿ ತಿರುಗಿಸಿದ ಮಹೇಶ. ಅಗಲವಾಗಿ ತೆರೆದಿದ್ದ ಶವದ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗಿ ನಿಸ್ತೇಜವಾಗಿ ಅವನನ್ನೇ ನೋಡುತ್ತಿದ್ದವು.

ಅವನು ತಾನಿಲ್ಲಿ ಭೇಟಿಯಾಗಲು ಬಂದಿದ್ದ ಕೆರನ್ !

ಗಂಟಲಲ್ಲಿ ದಪ್ಪ ಕಲ್ಲೇನೋ ಸಿಕ್ಕಿ ಬಿದ್ದಂತೆ ಫೀಲಾದ ಮಹೇಶ ಆ ದೃಶ್ಯವನ್ನು ನೋಡಿ. ತನ್ನ ಅನುಮಾನ ಇಷ್ಟೊಂದು ಖಚಿತವಾಗಿ ಬಿಡುವುದೆಂದು ಕನಸಿನಲ್ಲೂ ಊಹಿಸಿರಲಿಲ್ಲ ಅವನು.

ಗಾಯವನ್ನು ನೋಡಿದಾಗ ಯಾರೋ ಪಾಯಿಂಟ್ ಬ್ಲಾಂಕ್ ರೇಂಜ್ ನಿಂದ ಶೂಟ್ ಮಾಡಿದ್ದಾರೆಂಬುದು ಸ್ಪಷ್ಟವಾಗಿತ್ತು. ಆದರೂ ತಪ್ಪಿಸಿ ಕೊಂಡು ಪರಾರಿಯಾಗಿ ಬಂದು ಗೂಡು ಸೇರಿದಂತಿದ್ದ ಕೆರನ್. ಬಟ್.... ಮುಂಬಾಗಿಲಿಗೆ ಹಾಕಿರುವ ಬೀಗ ಹಾಕಿದಂತೆಯೇ ಇದೆ. ಬೀಗ ತೆಗೆಯದೆ ಅವನು ಒಳಕ್ಕೆ ಹೇಗೆ ಬಂದ ? ಬಾಗಿಲ ಬಳಿಯಲ್ಲಿ ತನಗೆ ರಕ್ತದ ಕಲೆಗಳು ಕಾಣಿಸಲಿಲ್ಲ.

ಅನುಮಾನದೊಡನೆಯೇ ಬೆಡ್‌ರೂಂನಿಂದ ಹೊರಗೆ ಬಂದ ಮಹೇಶ. ಟೇಬಲ್ ಪಕ್ಕದಿಂದ ಅಡಿಗೆ ಮನೆಯ ಕಡೆಗೆ ಹೋಗಿದ್ದವು ರಕ್ತದ ಕಲೆಗಳು. ಅವನ್ನು ಹಿಂಬಾಲಿಸಿಕೊಂಡು ಹೋದ. ಅಡಿಗೆ ಮನೆಯ ಬಾಗಿಲ ಮೇಲೆ ಸ್ಪಷ್ಟವಾಗಿ ಮೂಡಿದ್ದವು ರಕ್ತದಲ್ಲಿ ನೆಂದಿರುವ ಫಿಂಗರ್ ಪ್ರಿಂಟ್ಸ್. ಬಾಗಿಲು ತೆರೆದೊಡನೆ ಕಾಣಿಸಿತ್ತು ಕಂಬಿಗಳಿಲ್ಲದ ಕಿಟಕಿ ಅದರಾಚೆಗೆ ಕಡಿಮೆ ಎತ್ತರದ ಗೋಡೆ !

ಕ್ಷಣದಲ್ಲಿ ಅರ್ಥವಾಗಿತ್ತು ಕರನ್ ಆ ಕಿಟಕಿಯ ಮೂಲಕ ಒಳಕ್ಕೆ ಪ್ರವೇಶಿಸಿದ್ದಾನೆಂದು. ಆದರೆ ಅವನು ಹೀಗೆ ಕಳ್ಳತನದಲ್ಲಿ ತನ್ನ ಪೋರ್ಷನ್ ನೊಳಗೆ ಪ್ರವೇಶಿಸುವ ಅಗತ್ಯವೇನು ಬಂತು ಎಂದು ಮಾತ್ರ ಅರ್ಥ ವಾಗಲಿಲ್ಲ. ಯೋಚಿಸುತ್ತಲೇ ಹಿಂದೆ ತಿರುಗಿ ಬೆಡ್‌ರೂಂ ಕಡೆಗೆ ನಡೆದ ಮಹೇಶ.

ಬೆಡ್‌ರೂಂನೊಳಗೆ ಪ್ರವೇಶಿಸುತ್ತಿರುವಾಗ ಹೊಳೆದಿತ್ತೊಂದು ಯೋಚನೆ. ಮುಂಬಾಗಿಲ ಬೀಗ ತೆರೆದು ಕರನ್ ಒಳಕ್ಕೆ ಪ್ರವೇಶಿಸಿದ್ದರೆ

ಅವನು ಒಳಗಿದ್ದಾನೆಂದು ಭಾವಿಸಿ ಯಾರಾದರೊಬ್ಬರು ಇಷ್ಟೊತ್ತಿಗೆ ಅವನಿಗಾಗಿ ಒಳಗಡೆಗೆ ಬರುತ್ತಿದ್ದರು. ಅವನ ಹೆಣ ನೋಡಿ ಪೋಲೀಸರಿಗೆ ಕಂಪ್ಲೇಂಟ್ ಮಾಡುತ್ತಿದ್ದರು.

ಆದರೆ ಹಾಗಾಗುವುದು ಬೇಕಾಗಿರಲಿಲ್ಲ ಕರೆನ್‌ಗೆ. ತನ್ನ ಹೆಣವನ್ನು ಪೋಲೀಸರು ಮೊದಲು ನೋಡಬಾರದೆಂಬ ಇಚ್ಛೆಯೊಡನೆಯೇ, ತಾನು ಮನೆಯಲ್ಲಿಲ್ಲವೆಂದು ಭಾವಿಸುವಂತೆ ತಲೆಬಾಗಿಲಿಗೆ ಬೀಗ ಹಾಕಿ ಹಿಂಬಾಗಿಲ ಮೂಲಕ ಒಳಕ್ಕೆ ಸೇರಿಕೊಂಡಿದ್ದ.

ಬಹುಶಃ ಆ ದಾರಿಯನ್ನು ಈಗಾಗಲೇ ಸಾಕಷ್ಟು ಸಲ ಉಪಯೋಗಿಸಿದ್ದಿರಬಹುದು.

ಪೋಲೀಸರಿಗೂ ಮೊದಲು ತನ್ನ ಹೆಣ ಯಾರ ಕಣ್ಣಿಗೆ ಬೀಳಬೇಕೆಂದು ಕರೆನ್ ಈ ಚಾಲಾಕಿ ನಡೆ ತೋರಿದ್ದ !

ಆ ಪ್ರಶ್ನೆಗೆ ಉತ್ತರ ಟಕ್ಕನೆ ಹೊಳೆದಿತ್ತು.

ಕರೆನ್‌ಗೆ ತನ್ನ ಡಿಪಾರ್ಟ್‌ಮೆಂಟ್‌ಗೆ ಕಳಿಸಿದ ಮೆಸ್ಸೇಜ್ ತಲುಪಿದೆ. ತನ್ನ ಭೇಟಿಯಾಗಲು ಸೆಲ್‌ನ ಒಬ್ಬ ಏಜೆಂಟ್ ಬರಲಿದ್ದಾನೆಂದು ತಿಳಿದಿದೆ. ಆದ್ದರಿಂದಲೇ ಮೊದಲು ಆ ಏಜೆಂಟ್ ಕಣ್ಣಿಗೆ ತನ್ನ ಹೆಣ ಕಾಣಬೇಕೆಂದು ಬುಲೆಟ್ ಗಾಯದಿಂದಾಗಿ ಸಾವು ಬದುಕಿನ ನಡುವೆ ತೊಳಲುತ್ತಿದ್ದರೂ ಸಹ ಹಿಂಬಾಗಿಲ ಮೂಲಕ ಒಳಕ್ಕೆ ಬಂದಿದ್ದ ಅವನು. ಬಾಗಿಲ ಬೀಗ ನೋಡಿ ಹಿಂದಿರುಗಿ ಬಿಡುವ ಮನಸ್ಸತ್ವದವರಲ್ಲ. ಸೆಲ್ ಏಜೆಂಟರು ಎಂದವನಿಗೆ ಚೆನ್ನಾಗಿ ತಿಳಿದಂತಿತ್ತು.

ಕತ್ತಲಲ್ಲಿ ಮಿಂಚು ಕೋರೈಸಿದಂತೆ ಈ ಯೋಚನೆ ಮನದಲ್ಲಿ ಮೂಡುತ್ತಿದ್ದ ಹಾಗೆಯೇ ಇನ್ನೊಂದು ವಿಷಯ ಸಹ ಅವನ ಅವಗಾಹನೆಗೆ ಬಂದಿತು .

ತನ್ನ ಬಾಯಿಂದಲೇ ತಾನು ಹೇಳಲಾಗದ ಪರಿಸ್ಥಿತಿಯಲ್ಲಿ ಸೆಲ್ ಏಜೆಂಟ್‌ಗೆ ತಾನು ಹೇಳಬೇಕಾದ ಮಾಹಿತಿಯನ್ನು ತನ್ನ ಶರೀರದಲ್ಲೇ ಅಡಗಿಸಿಕೊಂಡು ಶವರೂಪದಲ್ಲಿ ಸಹಾಯ ಮಾಡಲು ರೆಡಿಯಾಗಿ ಈ ಪ್ಲಾನ್ ಆಚರಣೆಗಿಳಿಸಿದ್ದಾನೆ ಕರನ್.

ಅವನಿಗೆ ಮನದಲ್ಲೇ ಹ್ಯಾಟ್ಸ್‌ಆಫ್ ಮಾಡಿ ಬೆಡ್ ಸಮೀಪಿಸಿ ಕರನ್ ಮೃತ ದೇಹವನ್ನು ಸರಿಯಾಗಿ ಮಲಗಿಸಿದ ಮಹೇಶ. ಅವನು ಸತ್ತು ಇಪ್ಪತ್ನಾಲ್ಕು ಗಂಟೆಗಳ ಮೇಲೇ ಆಗಿರಬೇಕು, ಬುಲೆಟ್ ಹೋಲ್‌ನಿಂದ ಸುರಿದು ಬೆಡ್ ನೆನೆಸಿರುವ ರಕ್ತ ಕ್ಲಾಟ್ ಆಗಿ ಬಿಟ್ಟಿತ್ತು. ಐಸ್‌ಕ್ಯೂಬ್ ಮುಟ್ಟಿದಂತಾಗುತ್ತಿತ್ತು ದೇಹ ಮುಟ್ಟಿದರೆ.

ಅವನ ದೇಹ ತಪಾಸಣೆ ಶುರುಮಾಡಿದ ಮಹೇಶ. ಹಳೆಯ ಒಂದು ಪರ್ಸ್, ಮುದುರಿರುವ ಸಿಟಿ ಬಸ್ ಟಿಕೆಟ್ಸ್, ಬೀಗದ ಕೈಗೊಂಚಲು, ಮುಡಚಿರುವ ಕರ್ಚೀಫ್....ಇವಿಷ್ಟರ ವಿನಹ ಬೇರೇನೂ ಸಿಗಲಿಲ್ಲ.

ಎರಡು ಮೂರು ಸಲ ಚೆಕ್ ಮಾಡಿದರೂ ಅಷ್ಟೇ !

ಹಣೆಯ ಮೇಲೆ ಕವಿದ ಬೆವರ ಹನಿಗಳನ್ನು ಒರೆಸಿಕೊಂಡು ಸಿಗರೇಟೊಂದು ಹಚ್ಚಿಕೊಂಡ ಮಹೇಶ,

ತನಗಾಗಿ ಅವನು ಸಂಗ್ರಹಿಸಿಟ್ಟಿದ್ದ ಮಾಹಿತಿಯನ್ನು ಎಲ್ಲಿ ಅಡಗಿಸಿಟ್ಟಿದ್ದಾನೆ ?

ಅರ್ಧ ಸಿಗರೇಟ್ ಉರಿದು ಬೂದಿಯಾದ ಮೇಲೆ ದಿಢೀರನೆ ನೆನಪಾಗಿತ್ತವನಿಗೆ.. ಅವನ್ಯಾವಾಗಲೂ ಭುಜಕ್ಕೆ ಸಿಗಿಸಿಕೊಂಡು ಓಡಾಡುತ್ತಿದ್ದ ಕ್ಯಾಮರಾ ! ಎಲ್ಲಿ ಅದು ?

ಬೆಡ್ ಎಲ್ಲ ಹುಡುಕಿ ಕೆಳಕ್ಕೆ ಬಗ್ಗಿದ ಮಹೇಶ. ಲೈಟರ್ ಬೆಳಕಲ್ಲಿ ಮಂಚದ ಕೆಳಕ್ಕೆ ಬೇಕೆಂದೇ ತಳ್ಳಿರುವ ಕ್ಯಾಮರಾ ಕಾಣಿಸಿತು

ಕೈ ಚಾಚಿ ಅದನ್ನೆತ್ತಿಕೊಂಡ. ಸಣ್ಣ ಕ್ಯಾಮರಾ ಅದು. ಲೆದರ್ ಕೇಸ್ ಬಿಚ್ಚಿದ. ಎಲ್ಲೂ ಸಣ್ಣ ಕಾಗದದ ತುಣುಕೂ ಇಲ್ಲ ಕೇಸ್‌ನಲ್ಲಿ. ಕ್ಯಾಮೆರಾದಲ್ಲಿ ಫಿಲ್ಮ್ ಲೋಡ್ ಆಗಿತ್ತು. ಹೊರಗೆ ತೆಗೆಯ ಹೋದವನು ತಡೆದ. ಅವನ ಕಣ್ಣುಗಳು ಬೆಡ್‌ರೂಮನ್ನೆಲ್ಲಾ ತಡಕಿದವು.

ಬೆಡ್‌ರೂಂನ ಒಂದು ಮೂಲೆಯಲ್ಲಿ ನಾಲ್ಕು ಮರದ ಫ್ರೇಂಗಳ ಹಿಂದೆ ಪುಟ್ಟ ಡಾರ್ಕ್ ರೂಮೊಂದನ್ನು ಸಪರೇಟಾಗಿ ಪ್ರೈವೇಟ್ ಮಾಡ ಲಾಗಿತ್ತು. ತೆಗೆದ ಫೋಟೋಗಳನ್ನು ಸ್ಟುಡಿಯೋಗೆ ತೆಗೆದುಕೊಂಡು ಹೋಗುವ ಅವಶ್ಯಕತೆಯಿಲ್ಲದೆ ಅಲ್ಲಿಯೇ ಡೆವಲಪ್ ಮಾಡಿಕೊಳ್ಳಲೆಂದು ಮಾಡಿದ್ದ ಏರ್ಪಾಟು ಅದು.

ಕಾರ್ಡ್‌ಬೋರ್ಡ್ ಬಾಗಿಲ ಹಿಂದೆ ಸಣ್ಣ ಕೊಠಡಿಯಂತಿದ್ದ ಡಾರ್ಕ್ ರೂಂ ಮುಂದಿನ ಸ್ಕ್ರೀನ್ ಸರಿಸಿ ಒಳಕ್ಕೆ ಹೋಗಿ ಸ್ಕ್ರೀನ್ ಎಳೆದ ಮಹೇಶ.

ಒಳಗೆ ಫೋಟೋ ಡೆವಲಪ್ ಮಾಡಿ ಪ್ರಿಂಟ್ ಹಾಕಲು ಬೇಕಾದ ಉಪಕರಣಗಳೆಲ್ಲಾ ಇದ್ದವು.

ಸರಸರನೆ ಕ್ಯಾಮರಾದಲ್ಲಿನ ಫಿಲ್ಮ್ ಡೆವಲಪ್ ಮಾಡುವುದರಲ್ಲಿ ತನ್ಮಯನಾದ. ಹತ್ತು ನಿಮಿಷಗಳಲ್ಲಿ ಕ್ಯಾಮರಾದೊಳಗಿದ್ದ ಫಿಲ್ಮ್ ರೋಲ್ ತೊಳೆದು ಪ್ರತ್ಯೇಕವಾಗಿ ಏರ್ಪಾಟು ಮಾಡಿದ್ದ ಟೇಬಲ್ ಲೈಟ್ ಹತ್ತಿಸಿ ಆ ಬೆಳಕಲ್ಲಿ ಫಿಲ್ಮ್ ಪರಿಶೀಲಿಸಿದ.

ಮೊದಲು ಮೂರು ಪ್ರಕೃತಿ ದೃಶ್ಯಗಳು. ನೋಡುತ್ತಿದ್ದಂತೆ ಕರನ್ನ ನನ್ನ ಕೆಲಸದಲ್ಲಿ ಪರಿಣಿತ ಎಂದು ಸೂಚಿಸುತ್ತಿದ್ದವು. ಇನ್ನೊಂದು ಫೋಟೋ ಒಬ್ಬ ವೃದ್ಧನದು. ಆಮೇಲೆ ಯಾರ ಫೋಟೋಗಳೂ ಇಲ್ಲ. ಏನೋ ಗೆರೆ ಗಳು ಅಡ್ಡಾದಿಡ್ಡಿಯಾಗಿ ಎಳೆಯಲ್ಪಟ್ಟಿರುವಂತೆ ಗೋಚರಿಸುತ್ತಿದ್ದವು,

ಒಮ್ಮೆಲೇ ಅವನ ಮುಖ ಅರಳಿತು. ಪಕ್ಕದಲ್ಲಿದ್ದ ಒಂದು ಪೆನ್ಸಿಲ್ ಮತ್ತೂ ನೋಟ್ ಪ್ಯಾಡ್ ಎತ್ತಿಕೊಂಡು ಆ ಗೆರೆಗಳನ್ನು ನೋಡುತ್ತಾ

ಬರೆಯುತ್ತೊಡಗಿದವನು ಎರಡು ನಿಮಿಷದ ನಂತರ ತನ್ನ ಬರಹದ ಮೇಲೆ ಕಣ್ಣಾಡಿಸಿದ.

'ಫ್ರೆಂಡ್ !

ಬೈಚಾನ್ಸ್ ನಿನ್ನ ಭೇಟಿಯಾಗದಿದ್ದರೆ ಅಟ್‌ಲೀಸ್ಟ್ ನಿನ್ನ ನೋಟಕ್ಕೆ ಈ ಮೆಸ್ಸೇಜ್ ಆದರೂ ಕಾಣಿಸಲಿ ಕಾಣಿಸು ತ್ತದೆ ಎಂಬ ಆಶೆಯೊಡನೆ ಇದನ್ನು ಫೋಟೋ ತೆಗೆ ದಿದ್ದೇನೆ.

ಇಲ್ಲಿ ನನ್ನ ಚೆಕಿಂಗ್ ಇನ್ನೂ ಮುಗಿದಿಲ್ಲ ಇಲ್ಲಿಯವರೆಗೆ.

ನನಗೆ ದೊರಕಿರುವ ಆಧಾರವಂತೆ ಓಜೋ ಸ್ಟ್ರೀಟ್‌ನಲ್ಲಿರುವ ಬರ್ನ್ ಎಂಬ ವ್ಯಕ್ತಿಯನ್ನು ಅನುಮಾನಿಸಿದೆ. ಅವನ ಬಗ್ಗೆ ಎಲ್ಲ ವಿವರಗಳನ್ನು ಅರಿಯಲು ಹೋಗುತ್ತಿದ್ದೇನೆ. ಬದುಕಿ ಉಳಿದರೆ ಏನೇನು ನಡೆಯಿತೆಂಬುದನ್ನು ನನ್ನ ಬಾಯಿಂದಲೇ ಹೇಳುತ್ತೇನೆ. ಇಲ್ಲದಿದ್ದರೆ ನಡೆ ಯುತ್ತಿರುವ ದುರ್ಘಟನೆಗಳಿಗೆಲ್ಲಾ ಬರ್ನ್ ಕಾರಣನೆಂದೇ ಊಹಿಸಿ ಮುಂದಿನ ತನಿಖೆ ನಡೆಸುವ ಹೊಣೆಗಾರಿಕೆ ನಿನಗೆ ಬಿಡುತ್ತೇನೆ.

ಓಜೋ ಸ್ಟ್ರೀಟ್‌ನಲ್ಲಿರುವ ಶ್ರೀಮಂತ ವ್ಯಕ್ತಿ ಬರ್ನ್ ಬಗ್ಗೆ ಯಾರನ್ನು ವಿಚಾರಿಸಿದರೂ ಹೇಳುತ್ತಾರೆ.

ಗುಡ್ ಬೈ ಅಂಡ್ ಗುಡ್‌ಲಕ್.

—ಕರನ್'

ಫ್ರೆಷ್ ಸಿಗರೇಟ್ ಹಚ್ಚಿಕೊಂಡು ತಾನು ಡಿಕೋಡ್ ಮಾಡಿದ ಮೆಸ್ಸೇಜ್‌ಗೂ, ಫಿಲಂ ರೋಲ್‌ಗೂ ವ್ಯೆನರ್ ಜ್ವಾಲೆ ಸೋಕಿಸಿ ಕೆಳಕ್ಕೆಸೆದ ಮಹೇಶ ಪೂರ್ತಿ ಉರಿದು ಹೋಗುವವರೆಗೆ ಅಲ್ಲೇ ಇದ್ದ.

ನಂತರ ಕರನ್ ಶವದ ಮುಂದೆ ನಿಂತು ಸ್ಟಿಫ್ಫಾಗಿ ಸೆಲ್ಯೂಟ್ ಮಾಡಿದ.

"ಎಕ್ಸ್‌ಟ್ರೀಮ್ಲಿ ಸಾರಿ ಫಾರ್ ಇವರ್ ಸರ್ಡ ಡಿಮೈಸ್ ಫ್ರೆಂಡ್ !

ದೇಶ ದ್ರೋಹಿಗಳ ಧ್ವಂಸ ಮಾಡುವ ಕಾರ್ಯಾಚರಣೆಯ ನಡುವೆ ವೀರ ಸ್ವರ್ಗ ಸೇರಿದ ನಿನ್ನ ಆತ್ಮಕ್ಕೆ ಶತ್ರುಗಳ ರಕ್ತ ತರ್ಪಣ ಅರ್ಪಿಸುವ ಜವಾಬ್ದಾರಿ ನನಗಿದೆ" ಎಂದು ಮೆಲು ಧ್ವನಿಯಲ್ಲಿ ಹೇಳಿ ಹಿಂದಕ್ಕೆ ತಿರುಗಿದ. ಕ್ಷಣ ಯೋಚಿಸಿ ಹಿಂಬಾಗಿಲ ಕಡೆಗೆ ನಡೆದ. ಕಿಚನ್ ಡೋರ್ ತೆಗೆದು ಕಂಬಿ ಇಲ್ಲದ ಕಿಟಕಿಯ ಮೂಲಕ ಆಚೆಗೆ ಬಂದು ಮೊಂಡು ಗೋಡೆ ಏರಿ ಗಲ್ಲಿ ತಲುಪಿ ಮುಂದಕ್ಕೆ ನಡೆದು ಹೊರಟ.

ಅರ್ಧ ಗಂಟೆಯ ನಂತರ ಒಂದು ಪಬ್ಲಿಕ್ ಫೋನ್ ಮೂಲಕ ಪೋಲೀಸರಿಗೆ ಕರನ" ಸಂಗತಿ ತಿಳಿಸಿ ವೇಗವಾಗಿ ಅಲ್ಲಿಂದ ದೂರಾಗಿ ಬಿಟ್ಟ.

ರಾತ್ರಿ ಎಂಟಾಗಿತ್ತು ವೇಳೆ. ಇಂದಿಗಿನ್ನು ಮಾಡುವುದಿನ್ನೇನೂ ಇಲ್ಲ. ಟ್ಯಾಕ್ಸಿಯೊಂದನ್ನು ನಿಲ್ಲಿಸಿ ಹತ್ತಿ ತಾನು ಬಿಡದಿ ಏರ್ಪಡಿಸಿಕೊಂಡಿದ್ದ ಹೋಟೆಲ್ ಹೆಸರು ಹೇಳಿ ಸೀಟೊರಗಿ ಕುಳಿತು ಕಣ್ಣು ಮುಚ್ಚಿಕೊಂಡ.

ಕರನ್ ಶವ ಕಾಣಿಸಿಕೊಂಡಿತ್ತೊಂದು ಕ್ಷಣ ಕಣ್ಣ ಮುಂದೆ. ಅಯಾಚಿತವಾಗಿ ತಾನು ಮಿಜೋರಾಂನೊಳಗೆ ಕಾಲಿಡುವ ಹಿಂದಿನ ದಿನ ನಡೆದ ಘಟನೆಗಳು ನೆನಪಾದವು ಅವನಿಗೆ.

ದೆಹಲಿಯಲ್ಲಿ ಅಂದು ಸಂಜೆ....

ಬಾಂಗ್ಲಾ ದೇಶ್ ಅಸೈನ್‌ಮೆಂಟ್* ಯಶಸ್ವಿಯಾಗಿ ಮುಗಿಸಿ ಪಬ್ಲಾ ಕೊಡನೆ ದಿಲ್ಲಾಗಿ ವಾರವಿದ್ದು ದೆಹಲಿಗೆ ಹಿಂದಿರುಗಿ ಎರಡು ದಿನಗಳಾಗಿತ್ತಷ್ಟೇ.

---

* ಸ್ಪೈಕ್ಯಾಸಲ್—'ಜಿಂಕೆ'ಯ ಹೊಸ ಅಸೈನ್‌ಮೆಂಟ್ ಓದಿರಿ.

ಬೆಳಿಗ್ಗೆ, ಸಂಜೆ ಸೆಲ್ ಜಿಮ್‌ನಲ್ಲಿ ಎರಡು ಗಂಟೆಗಳ ವ್ಯಾಯಾಮದ ವಿನಹ ಸದ್ಯಕ್ಕೆ ಅಸೈನ್‌ಮೆಂಟ್ ಯಾವುದೇ ತರಲಿಯಿರಲಿಲ್ಲ.

ಆಗಲೇ ಅವನಿಗೆ ಹೊಸ ಗರ್ಲ್ ಫ್ರೆಂಡೊಬ್ಬಳ ಪರಿಚಯವಾಗಿತ್ತು.

ಒಬೆರಾಯ್ ಹೋಟೆಲ್‌ನ ರಿಸೆಪ್ಷನಿಸ್ಟ್ ರೂಪಾ ಇಪ್ಪತ್ತೈದರ ಆ ಚುರುಕು ಹುಡುಗಿ – ಮಿಸ್ ಇಂಡಿಯಾ ಆಗಲು ಲಗತ್ತಾದವಳೆಂದೇ ಮಹೇಶನ ಅಭಿಪ್ರಾಯ–ಎರಡೇ ದಿನಗಳಲ್ಲಿ ಬಹಳ ಆತ್ಮೀಯಳಾಗಿದ್ದಳು: ಆದರೂ ಗೆಳೆತನ ಬೆಡ್‌ರೂಂವರೆಗೆ ಬೆಳೆಯಲೊಪ್ಪಿರಲಿಲ್ಲ ಅವಳು. ಮಹೇಶನೂ ತೀವ್ರ ಪ್ರಯತ್ನವೆಸಗಿರಲಿಲ್ಲವೆಂದೇ ಹೇಳಬೇಕು: ಸ್ಲೋ ಆಗಿಯೇ ಲೆಟ್ ಹರ್ ಲೀಡ್ ದ ವೇ ಎಂದು ಸುಮ್ಮನಿದ್ದ.

ಅಂದು ಮಧ್ಯಾಹ್ನ ಅವನ ಅಪಾರ್ಟ್‌ಮೆಂಟ್‌ಗೆ ಫೋನ್ ಮಾಡಿದ್ದಳು ರೂಪಾ ಸಂಜೆ ಜೂಬಿಲಿ ಹಾಲ್‌ನಲ್ಲಿ ಯಾಮಿನಿ ಕೃಷ್ಣಮೂರ್ತಿಯ ಭರತನಾಟ್ಯವಿದೆಯೆಂದು, ಈಗಾಗಲೇ ತಾನು ಎರಡು ಗಂಟೆಗೆ ಸೀಟ್ ರಿಸರ್ವ್ ಮಾಡಿಸಿರುವೆನೆಂದು, ಮಹೇಶ ಥಿಯೇಟರ ಬಳಿಗೆ ನೇರ ಬಂದರೆ ಪ್ರದರ್ಶನ ಮುಗಿದ ಮೇಲೆ ತನ್ನ ಅಪಾರ್ಟ್‌ಮೆಂಟ್‌ನಲ್ಲಿ ಮೂನ್‌ಲೈಟ್ ಡಿನ್ನರ್ ಅರೇಂಜ್ ಮಾಡಿರುವೆನೆಂದೂ ತಿಳಿಸಿದಳು.

ಮೂನ್‌ಲೈಟ್ ಡಿನ್ನರ್ ನಂತರ ಮೂನ್ ಮೇಲೆ ಪ್ರಯಾಣ ಮಾಡುವ ಅವಕಾಶ ಸಿಗುವುದು ಗ್ಯಾರಂಟಿ ಎಂದು ಗೊತ್ತು ಕಸುಬುದಾರ ಮಹೇಶನಿಗೆ. ಅದ್ದರಿಂದಲೇ ತುಟಿಕ್ ಪಿಟಿಕ್ ಅನ್ನದೆ ಒಪ್ಪಿಬಿಟ್ಟ.

ಟ್ರಿಂ ಆಗಿ ಡ್ರೆಸ್ಸಾಗಿ ಸಂಜೆ ಐದಕ್ಕೆಲ್ಲಾ ಜೂಬಿಲಿ ಹಾಲ್ ಬಳಿ ಹಾಜರ್ ಯಜಮಾನ. ಆರಕ್ಕಿನ್ನು ಐದು ನಿಮಿಷವಿರುವಾಗ ಬಂದಳು ಸುರಸುಂದರಿ ರೂಪಾ. ಪ್ರದರ್ಶನಕ್ಕೆ ಬಂದಿದ್ದ ಎಲ್ಲರ ಕಣ್ಣುಗಳೂ ಅವಳ ಕಡೆಗೇನೇ ಹುಡುಗಿಯರ ನೋಟದಲ್ಲಿ ಮಾತ್ಸರ್ಯವಿದ್ದರೆ, ಗಂಡಸರ ಕಣ್ಣುಗಳಲ್ಲಿ ಅರಾಧನೆ.

ಆದರವಳ ಕಣ್ಣುಗಳಿಗೆ ಕಂಡದ್ದು ಚಾರ್ಮಿಂಗ್ ಸ್ಮೈಲ್‌ನೊಡನೆ ನಿಂತಿರುವ ಚೆಲುವ ಮಹೇಶನೊಬ್ಬನೇ !

ಮಿಲ್ಕ್ ಷೇಕ್ ಕುಡಿದು ಒಳಕ್ಕೆ ಹೋಗುವಾ ಅಂದ ಮಹೇಶನ ಸಜೆಶನ್‌ಗೆ ಒಪ್ಪಿದಳು ರೂಪಾ ಅವನ ಭುಜಕ್ಕಂಟಿಕೊಂಡೇ ರೆಸ್ಟೋರೆಂಟ್‌ನೊಳಕ್ಕೆ ನಡೆದಳು.

ಮಿಲ್ಕ್‌ಷೇಕ್ ಚಪ್ಪರಿಸಿ ಕೌಂಟರ್‌ನಲ್ಲಿ ಬಿಲ್ ಸಲ್ಲಿಸುವಾಗ ಅದೇಕೋ ಆಳೆತ್ತರದ ನಿಲುಗನ್ನಡಿಯತ್ತ ಹೊರಳಿದ ಮಹೇಶನ ಕಣ್ಣು ಅಲ್ಲೇ ಫ್ರೀಝಾಯಿತು !

ಆಪಲ್ ಜ್ಯೂಸ್ ಕೊನೆಯ ಗುಟುಕು ಹೀರಿ ಗ್ಲಾಸ್ ಕೆಳಗಿಟ್ಟು ಕಣ್ಣು ಮಿಟುಕಿಸಿದ ಕರ್ನಲ್‌ರ ಪರ್ಸನಲ್ ಡ್ರೈವರ್ ಬಾಬು !

ಮುಗಿಯಿತಿನ್ನು ಮೂನ್‌ಲೈಟ್ ಊಟ !

ಅದೃಷ್ಟ ಹುಡುಗಿಯರ ಕೇಸ್‌ನಲ್ಲಿ ಮಾತ್ರ ತನ್ನನ್ನೇಕೆ ಹೀಗೆ ಹೆಣಗಿಸುತ್ತದೆ ಎಂಬ ತೀವ್ರಾಲೋಚನೆಯೊಡನೆಯೇ, "ಹನಿ ! ಯು ಗೋ ಅಹೆಡ್. ನಾನು ಒಂದು ಫೋನ್ ಕಾಲ ಮಾಡಿ ಬಂದು ಬಿಡುತ್ತೇನೆ. !" ಎಂದವಳಿಗೆ ಇನ್ನೊಂದು ಮಾತು ಹೇಳಲು ಅವಕಾಶ ಕೊಡದೆ ಹಾಲ್ ಬಾಗಿಲವರೆಗೆ ಬಂದು ಒಳಕ್ಕೆ ಕಳಿಸಿ ಬಿಟ್ಟ.

ಸಂಶಯದೊಡನೆಯೇ ತಿರುಗಿ ತಿರುಗಿ ನೋಡುತ್ತಾ ಹೋದಳವಳು.

ಜಾಮೂನ್ ತುಂಬಿದ ಪ್ಲೇಟ್ ಕೈನಲ್ಲಿಟ್ಟು ತಟಕ್ಕನೆ ಸಕ್ಕರೆ ಕಾಯಿಲೆ ದಯಪಾಲಿಸಿದ ದೇವರನ್ನು ಬೈದುಕೊಳ್ಳುತ್ತಲೇ ಪಾರ್ಕಿಂಗ್ ಲಾಟ್‌ನಲ್ಲಿ ನಿಲ್ಲಿಸಿದ್ದ ಬಿಳಿಯ ಅಂಬಾಸಡರ್ ಕಾರಿನ ಬಳಿಗೆ ಬಂದ ಮಹೇಶ. ಅಷ್ಟೊತ್ತಿಗೆ ಅಲ್ಲಿ ಬಂದು ನಿಂತಿದ್ದ ಬಾಬು ಸ್ಮಾರ್ಟಾಗಿ ಸೆಲ್ಯೂಟ್ ಮಾಡಿ ಹಿಂದಿನ ಬಾಗಿಲು ತೆರೆದ.

"ಬಾಸ' ನಿನ್ನ ಅರ್ಜೆಂಟಾಗಿ ಬರ ಹೇಳಿದ್ದಾರೆ ಮಹೇಶ್. ನೀನು ಇಲ್ಲಿಗೆ ಹೊರಟೆ ಎಂದು ನಿನ್ನ ಅಪಾರ್ಟಮೆಂಟ್ ಗಾರ್ಡ್ ತಿಳಿಸಿದ. ತಕ್ಷಣ ಇಲ್ಲಿಗೆ ಬಂದೆ" ಒಡಬಡನೆ ಹೇಳಿದ.

"ಬಾಸ ಆಫೀಸ್'ನಲ್ಲೇ ಇದ್ದಾರೆಯೇ ?" ಸಿಗರೇಟೊಂದು ಹತ್ತಿಸಿ ಕೊಳ್ಳುತ್ತಾ ಕೇಳಿದ ಮಹೇಶ.

"ಇಲ್ಲ. ಹೋಂ ಮಿನಿಸ್ಟರ್ ಬಂಗಲೆಯಲ್ಲಿದ್ದಾರೆ." ಅಂದ ಬಾಬು.

ಬೆಚ್ಚಿ ಬಿದ್ದ ಮಹೇಶ,

"ಗೃಹ ಸಚಿವರ ಜೊತೆಗೆ ಪ್ರಧಾನಮಂತ್ರಿಗಳ ಆಪ್ತ ಕಾರ್ಯದರ್ಶಿ ಹಾಗೂ ಸಿಬಿಐ ಚೀಫ್ ನರೇಂದ್ರದತ್ತಾ ಸಹ ಇದ್ದಾರೆ ಮಹೇಶ್... ...." ಮೆಲ್ಲಗೆ ವಿಷಯ ಹೊರಗಿಟ್ಟ ಬಾಬು.

ಆ ಏಟಿಗೆ ಮಾಯವಾಗಿತ್ತು ಮಹೇಶನ ಬೇಸರ. ತನ್ನೊಡನಿದ್ದ ಒಬೆರಾಯ್ ಹೋಟೆಲ್ ರಿಸೆಪ್ಷನಿಸ್ಟ್ ರೂಪಾಳನ್ನು ಹುಡುಕಿ ತಾನು ಅರ್ಜಂಟ್ ಕೆಲಸದ ಮೇಲೆ ದೇಶ ಬಿಟ್ಟು ಹೊರಡುತ್ತಿರುವೆನೆಂದು, ಬಂದೊಡನೆ ಭೇಟಿಯಾಗುವೆನೆಂದು ಅವಳಿಗೆ ತಿಳಿಸಿ ಟ್ಯಾಕ್ಸಿಯೊಂದರಲ್ಲಿ ಗೃಹಸಚಿವರ ಬಂಗಲೆಗೆ ಬರುವಂತೆ ಬಾಬುವಿನ ಮನ ಒಲಿಸಿ ಕಳಿಸಿ ತಾನು ಅಂಬಾಸಡರ್ ನಲ್ಲಿ ಕುಳಿತು ಕಾರು ಸ್ಟಾರ್ಟ್ ಮಾಡಿದ ಮಹೇಶ.

ಕಾರು ಡ್ರೈವ ಮಾಡುತ್ತಿದ್ದಂತೆ ಇಷ್ಟೊಂದು ಅರ್ಜೆಂಟಾಗಿ ತನಗೆ ಕರೆ ಕಳಿಸಿರುವ ಕಾರಣವೇನೋ ಅರಿಯುವ ಪ್ರಯತ್ನದಲ್ಲಿತ್ತು ಅವನ ಮಿದುಳು.

ಅರ್ಧ ಗಂಟೆಯಲ್ಲಿ ಹೋಂ ಮಿನಿಸ್ಟರ್ ಬಂಗಲೆಯ ಮುಂದೆ ನಿಂತಿತ್ತು ಅಂಭಾಸಡರ್. ವರಾಂಡದಲ್ಲೇ ಅಸಹನೆಯೊಡನೆ ಶತಪಥ ಹಾಕುತ್ತಿದ್ದರು

ಕರ್ನಲ್. ಕಾರು ನಿಂತೊಡನೆ ತುಟಿಗಳ ನಡುವೆ ಉರಿಯುತ್ತಿದ್ದ ಸಿಗಾರ್ ಆಷ್‌ಟ್ರೇಯಲ್ಲದುಮಿ ಸರಸರನೆ ಮೆಟ್ಟಿಲಿಳಿದು ಬಂದರು.

ಇನ್ನೇನು ಅರ್ಚನೆ ಶುರುವಾಗುತ್ತದೆ ಅಂದುಕೊಂಡಿದ್ದ ಮಹೇಶನಿಗೆ ಅವರು, "ಬಾ ಸನ್ !" ಎಂದು ಭುಜದ ಮೇಲೆ ಕೈ ಹಾಕಿ ಒಳಕ್ಕೆ ಕರೆದು ಕೊಂಡು ಹೋದಾಗ ಎಲ್ಲಿಲ್ಲದ ಆಶ್ಚರ್ಯ.

ತಾನೂ ಕೇಳಬೇಕೆಂದುಕೊಂಡಿದ್ದ ಪ್ರಶ್ನೆಯನ್ನು ಹಾಗೆಯೇ ಅಣಗಿಸಿ ಸೈಲೆಂಟಾಗಿ ಅವರೊಡನೆ ನಡೆದ ಮಹೇಶ.

ಕಾನ್ಫರೆನ್ಸ್ ಹಾಲ್‌ನಲ್ಲಿ ಸಣ್ಣ ದನಿಯಲ್ಲಿ ಏನೋ ಹೇಳುತ್ತಿದ್ದ ಗೃಹ ಸಚಿವರು ಮಹೇಶನನ್ನು ನೋಡಿದೊಡನೆ ಮುಗುಳ್ನಗೆಯೊಂದಿಗೆ ಆಹ್ವಾನಿಸಿ ದರು. ಅವರ ಪಕ್ಕದಲ್ಲೇ ಕುಳಿತಿದ್ದರು ಪ್ರಧಾನಮಂತ್ರಿಗಳ ಆಪ್ತ ಕಾರ್ಯ ದರ್ಶಿ. ಎಡ ಬದಿಗೆ ಆಸೀನರಾಗಿದ್ದರು ಸಿಬಿಐ ಚೀಫ್ ದತ್ತಾ.

ಎಲ್ಲರಿಗೂ ಸ್ಮಾರ್ಟಾಗಿ ವಿಷ್ ಮಾಡಿದ ಮಹೇಶ.

"ಕಮಾನ್ ಕಂಡರ ಬಾಯ್ ....ಪ್ಲೀಸ್ ಬಿ ಸೀಟೆಡ್ !" ಚೇರ್ ಆಫರ್ ಮಾಡಿದರು ಗೃಹಸಚಿವರು.

ಕರ್ನಲ್‌ರ ಪಕ್ಕದ ಕುರ್ಚಿಯಲ್ಲಿ ಕೂರುತ್ತಿದ್ದಂತೆ ಓರೆ ನೋಟ ದಿಂದಲೇ ಎಲ್ಲರ ಮುಖಗಳನ್ನು ಪರಿಶೀಲಿಸಿದ ಮಹೇಶ. ಬಹು ಗಹನ ಸಮಸ್ಯೆಯೊಂದನ್ನು ಚರ್ಚಿಸುತ್ತಿರುವಂತೆ ಗಂಭೀರವಾಗಿದ್ದವು ಅವರೆಲ್ಲರ ವದನಗಳು

ಫಾರ್ಮಾಲಿಟೀಸ್ ಮುಗಿದ ಮೇಲೆ ತುಟಿ ತೆರೆದರು ಗೃಹಸಚಿವರು.

"ಮಹೇಶ್... ಮಿಜೋರಾಂನಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಬಗ್ಗೆ ನಿನಗೆ ಪೂರ್ಣ ಅರಿವು ಇದೆಯೆಂದುಕೊಳ್ಳುತ್ತೇನೆ ..." ಅಂದರು ಸಾಲೋಚನೆ ಯೊಡನೆ ನೋಡುತ್ತಾ.

ತಲೆ ಕುಣಿಸಿದ ಮಹೇಶ. ಅಡಗಿದಂತಿದ್ದ ಮಿಜೋಗಳ ಪ್ರತಿಭಟನಾ ಉದ್ಯಮ ಒಂದು ತಿಂಗಳ ಹಿಂದೆ ಮತ್ತೆ ಶುರುವಾಗಿತ್ತು. ಮಿಂಚಿನ ಮುಷ್ಕರ, ಭಾರೀ ಪ್ರದರ್ಶನಗಳು, ಪ್ರತಿಭಟನಾ ಸಭೆಗಳು ಒಂದೊಂದಾಗಿ ತಲೆಯೆತ್ತಿದ್ದವು ಮಿಜೋ ರಾಷ್ಟ್ರೀಯ ವಾದಿಗಳ ಬ್ಯಾನರ್‌ನಡಿಯಲ್ಲಿ.

"ಭಿನ್ನಮತದ ನಡುವೆ ಏಕತೆ ಸಾಧಿಸಿದ ಏಕೈಕ ದೇಶ ನಮ್ಮದು ಮಹೇಶ. ಎಷ್ಟೆಷ್ಟೋ ಮತಗಳು, ಜಾತಿಗಳಿದ್ದರೂ ಈ ಸುವಿಶಾಲ ದೇಶವೆಲ್ಲ ಏಕ ಪರಿಪಾಲನೆಯೊಡನಿರುವಾಗಲೇ ಅಭಿವೃದ್ಧಿ ಕಾರ್ಯಕ್ರಮಗಳ ಸುಗಮ ವಾಗಿ ಜಾರಿಗೊಳಿಸಿ ಎಲ್ಲರನ್ನು ಸಂತೃಪ್ತರನ್ನಾಗಿಸಲು ಸಾಧ್ಯ. ಅದೇ ಅಂದಿನ, ಇಂದಿನ ಭಾರತೀಯ ನಾಯಕರೆಲ್ಲರ ಆಶಯ ಕೂಡ.

"ಆದರೆ... ಆ ಆಸೆಗೆ ಕೊಡಲಿ ಏಟಿನಂತೆ ವಿಜೋರಾಂ ಅನ್ನು ಸ್ವತಂತ್ರ ದೇಶವನ್ನಾಗಿ ಮಾಡಬೇಕೆಂದು ಕೂಗೆಬ್ಬಿಸಿದ್ದಾರೆ ಅಲ್ಲಿನ ಕೆಲವು ದಂಗೆಕೋರ ನಾಯಕರು. ಅವರನ್ನು ರಾಷ್ಟ್ರೀಯ ವಾಹಿನಿಗೆ ಎಳೆದು ತರುವ ನಿರಂತರ ಪ್ರಯತ್ನದೊಡನಿದ್ದಾರೆ ಹಿರಿಯ ನಾಯಕರು. ಆದರೆ ಅನಿರೀಕ್ಷಿತ ರೀತಿ ಯಲ್ಲಿ ಪರಿಸ್ಥಿತಿಗಳು ಅದಲು ಬದಲಾಗಿ ನಮ್ಮ ಕೈ ಮೀರಿ ಹೋಗುವ ಹಂತ ತಲುಪಿದೆ."

ಶ್ರದ್ಧೆಯೊಡನೆ ಕೇಳುತ್ತಿದ್ದ ಮಹೇಶ.

"ಮಿಜೋಗಳ ಸ್ವತಂತ್ರ ರಾಷ್ಟ್ರದ ಆಶಯದ ನಡುವೆ ಮೆಲ್ಲಗೆ ತಮ್ಮ ತಲೆ ತೂರಿಸಿವೆ ಕೆಲವು ರಾಷ್ಟ್ರ ವಿರೋಧಿ ಶಕ್ತಿಗಳು. ಇವರು ಮಿಜೋ ಮುಷ್ಕರದ ಮರೆಯಲ್ಲಿ ಭಯಂಕರ ಹಿಂಸಾಕಾಂಡಕ್ಕೆ ಪ್ರೇರೇಪಣೆ ನೀಡು ತ್ತಿದ್ದಾರೆ ಮಹೇಶ್ ! ಈಗಾಗಲೇ ನೂರಾರು ಜನ ಆ ದಳ್ಳುರಿಗೆ ಬಲಿ ಯಾಗಿದ್ದಾರೆ ಅವರಲ್ಲಿ ಮುಷ್ಕರ ನಿರತರೇ ಹೆಚ್ಚು. ಅದರಿಂದಾಗಿ ಶಾಂತ ರೀತಿಯಲ್ಲಿ ಸಾಗುತ್ತಿದ್ದ ಮುಷ್ಕರ ಈಗ ವಯೋಲೆಂಟ್ ಆಗಿ ಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಡೆಡ್ಲಿ ವೆಪನ್‌ಗಳ ಮೂಲಕ ಪ್ರಜೆಗಳ ಮೇಲೆ ದಾಳಿಯೆಸಗಲು

ಶುರುವಾಗಿವೆ ಆ ಶಕ್ತಿಗಳು. ಅವರೆಸೆದ ಬಾಂಬ್‌ಗಳಿಂದಾಗಿ ಕುಸಿದ ಕಟ್ಟಡಗಳು ಇಪ್ಪತ್ತಕ್ಕಿಂತಲೂ ಹೆಚ್ಚು. ಸಾವು ನೋವುಗಳ ಬಗ್ಗೆ ಹೇಳುವಂತೆಯೇ ಇಲ್ಲ. ಆ ಇಪ್ಪತ್ತು ಕಟ್ಟಡಗಳಲ್ಲಿ ಹೆಚ್ಚಿನವು ಸರ್ಕಾರೀ ಕಚೇರಿಗಳೇ. ಅತ್ಯುತ್ತಮ ಆಫೀಸರ್ಸ್ ಈ ಸ್ಫೋಟಗಳಿಗೆ ಸಿಕ್ಕಿ ಹತರಾದರು. ಮಿಜೋರಾಂ ಗಡಿಗಳನ್ನು ಸೀಲ್ ಮಾಡಿದ್ದರೂ ಈ ಬಾಂಬ್ಸ್, ಗ್ರೆನೇಡ್ಸ್ ಒಳಕ್ಕೆ ಹೇಗೆ ಬರುತ್ತಿವೆಯೆಂದೇ ಅರ್ಥವಾಗುತ್ತಿಲ್ಲ. ಇನ್ನು ಹೆಚ್ಚು ಕಾಲ ಉಪೇಕ್ಷಿಸಿ ಅಮಾಯಕ ಜನರ ಪ್ರಾಣಕ್ಕೆ ಸಂಚಕಾರ ತರುವಾಸೆಯಿಲ್ಲ ನಮಗೆ. ವಿ ವಾಂಟ್ ದಿಸ್ ಟು ಬಿ ಸ್ಟಾಪ್ಡ್ ! ಈ ಹಿಂಸಾಕಾಂಡದ ಹಿಂದಿರುವವರು ಯಾರೇ ಆಗಿರಲಿ ಅವರನ್ನು ಬಯಲಿಗೆಳೆದು ಧ್ವಂಸ ಮಾಡಿಬಿಡಬೇಕು !" ಗಂಭೀರವಾಗಿ ಹೇಳಿದರು ಗೃಹಸಚಿವರು.

ತಲೆಯಾಡಿಸಿದ ಮಹೇಶ. ಸಿಗಾರ್ ಹತ್ತಿಸಿಕೊಳ್ಳುತ್ತಾ ಸಿಬಿಐ ಚೀಫ್ ಕಡೆಗೆ ಸಾಭಿಪ್ರಾಯದೊಡನೆ ನೋಡಿದ ಕರ್ನಲ್.

ಗಂಟಲು ಸರಿಪಡಿಸಿಕೊಂಡರು ದತ್ತಾ. "ಮಹೇಶ್ ! ರಂಗಕ್ಕಿಳಿದ ನಮ್ಮ ಏಜೆಂಟರಲ್ಲಿ ಈಗ ಪ್ರಾಣದೊಡನಿರುವವನು ಒಬ್ಬನೇ ವ್ಯಕ್ತಿ. ಅವನೊಡನೆ ಮಿಜೋರಾಂಗೆ ಹೋದ ಆರು ಜನ ಏಜೆಂಟರೂ ಆ ದುಷ್ಕರ್ಮಿಗಳ ಕೈನಲ್ಲಿ ದಾರುಣವಾಗಿ ಹತ್ಯೆಗೀಡಾದರು. ಈಗಿರುವ ಏಜೆಂಟ್‌ನನ್ನು ನೀನು ಭೇಟಿಯಾದರೆ ಅಸೈನ್‌ಮೆಂಟ್‌ನಲ್ಲಿ ಮುಂದುವರೆಯಲು ಕ್ಲೂಗಳನ್ನು ನೀಡಬಲ್ಲ ಅವನು.

"ಅವನ ಹೆಸರು ಕರನ್. ಫೋಟೋಗ್ರಫಿ ಅವನ ಕವರ್. ಅವನಿಗೆ ಈ ದಿನವೇ ಮೆಸ್ಸೇಜು ಕಳಿಸಿದ್ದೇವೆ. ನಾಳೆ ಸಂಜೆ ಐಜ್ವಾಲ್ ಸಿಟಿ ಮಾರ್ಕೆಟ್ ಏರಿಯಾದಲ್ಲಿರುವ ಚಾಂದ್ನಿ ಬ್ಯಾಂಗಲ್ ಷಾಪ್ ಬಳಿ ನಿನ್ನನ್ನು ಭೇಟಿಯಾಗುತ್ತಾನವನು. ಅಕಸ್ಮಾತ್ ಅಲ್ಲವನ ಭೇಟಿ ಸಾಧ್ಯವಾಗದಿದ್ದಲ್ಲಿ ತಾತ್ಕಾಲಿಕವಾಗಿ ವಾಸವಾಗಿರುವ ಮನೆಯಲ್ಲೇ ಭೇಟಿಯಾಗು. ದಿಸೀಸ್ ಹಿಸ್ ಅಡ್ರೆಸ್...." ಒಂದು ಕವರ್ ಮಹೇಶನ ಕೈಗೆ ಕೊಟ್ಟರವರು.

ಅದರೊಳಗೆ ಸಿಬಿಐ ಏಜೆಂಟ್ ಕರ್ಸ್ ಫೋಟೋ, ಅವನ ಮನೆಯ ವಿಳಾಸ ಇರುವ ಸಣ್ಣ ಸ್ಲಿಪ್ ಇದ್ದವು.

"ನಿನ್ನ ಮಿಜೋರಾಂ ಪ್ರಯಾಣದ ಸುಳಿವು ಯಾರಿಗೂ ತಿಳಿಯು ವಂತಿಲ್ಲ ಸರ್! ಶತ್ರು ವರ್ಗದವರು ನಮ್ಮನ್ನು ಕ್ಲೋಸ್ ಆಗಿ ಅಬ್ಸರ್ವ್ ಮಾಡುತ್ತಿದ್ದಾರೆಂದು ಅನುಮಾನ. ಸೋ........ನೀನು ಸಾಮಾನ್ಯ ರೀತಿ ಯಲ್ಲೇ ಮಿಜೋರಾಂ ಪ್ರವೇಶಿಸಬೇಕು. ಟೇಕ್ ದಿಸ್ ಟ್ರೈನ್ ಟಿಕೆಟ್ಸ್. ಇಂದು ಮಧ್ಯ ರಾತ್ರಿಗೆ ಹೊರಡಲಿರುವ ಟ್ರೈನ್ ಮೂಲಕ ಐಜ್ವಾಲ್ ಸೇರಿ ಕೊಂಡ ಮೇಲೆ ಅಲ್ಲಿನ ಪರಿಸ್ಥಿತಿಗಳನ್ನು ಎಚ್ಚರಿಕೆಯೊಡನೆ ಗಮನಿಸಿ ನೆಕ್ಸ್ಟ್ ಸ್ಟೆಪ್ ಇಡು?" ಕೈನಲ್ಲಿರುವ ಸಿಗಾರ್ ಸಹ ಮರೆತು ಆವನನ್ನು ಸೀರಿ ಯಸ್ಸಾಗಿ ಎಚ್ಚರಿಸಿದರು ಕರ್ನಲ್.

"ಓ.ಕೆ. ಮಹೇಶ್! ಪ್ರಧಾನಿ ಮಿಜೋರಾಂ ಪರಿಸ್ಥಿತಿಯ ಬಗೆ ಬಹಳ ಕಳವಳಗೊಂಡಿದ್ದಾರೆ. ಅಲ್ಲಿನ ಪರಿಸ್ಥಿತಿ ಸುಧಾರಿಸಲು ನೀನೇ ತೀವ್ರ ಪ್ರಯತ್ನವೆಸಗಬೇಕು. ಗುಡ್ ಲಕ್!" ಅಂದರು ಪ್ರಧಾನಿಯವರ ಆಪ್ತ ಕಾರ್ಯದರ್ಶಿ,

ಮೇಲೆದ್ದು ಎಲ್ಲರನ್ನು ವಿಷ್ ಮಾಡಿದ ಮಹೇಶ. ಹೊರ ನಡೆದ ಆವನನ್ನು ಹಿಂಬಾಲಿಸಿದರು ಕರ್ನಲ್.

"ಸರ್! ನೀನು ತಕ್ಷಣ ಹೆಡ್ ಕ್ವಾರ್ಟರ್ಸ್‌ಗೆ ಹೋಗು. ನಿನಗೆ ಬೇಕಾದ ಸರಂಜಾಮುಗಳನ್ನೆಲ್ಲಾ ಅಲ್ಲಿ ರೆಡಿ ಮಾಡಿಟ್ಟಿರುತ್ತಾರೆ.

"ಇನ್ನೊಂದು ಬಹು ಮುಖ್ಯ ವಿಷಯ. ನಮಗೆ ಈ ವಿದ್ರೋಹಿ ಸಂಸ್ಥೆಗಳ ಸಂಗತಿ ಫೈಸಲ್ ಮಾಡಲಿರುವ ವ್ಯವಧಿ ಒಂದು ವಾರ ಮಾತ್ರ. ವಾರದೊಳಗೆ ಮಿಜೋರಾಂ ಅನ್ನು ಸ್ವತಂತ್ರ ದೇಶವೆಂದು ಘೋಷಿಸದಿದ್ದರೆ ರಕ್ತಪಾತವಾಗುವುದೆಂದು ಅನಾಮಧೇಯ ಆಲ್ಟಿಮೇಟಂ ಒಂದು ಪ್ರಧಾನ ಮಂತ್ರಿಯವರ ಕಾರ್ಯಾಲಯಕ್ಕೆ ಬಂದಿದೆ. ಸೋ ಬಿ ಕ್ವಿಕ್!"

ಈ ವಿಷಯ ತನ್ನೊಬ್ಬನ ಬಳಿಯೇ ಅವರು ಹೇಳಲು ಕಾರಣ ವೇನೆಂದು ಅರ್ಥವಾಯಿತು ಮಹೇಶನಿಗೆ. ಐ ವಾಂಟ್ ಫಾಸ್ಟ್ ಆಕ್ಷನ್ ಎಂದವರ ಸೂಚನೆ !

ತಲೆಯಾಡಿಸಿದ ಮಹೇಶ,

"ಅನವಶ್ಯಕ ರಗಳೆಗಳಲ್ಲಿ ತಲೆ ತೂರಿಸಿ ಮಿಜೋ ಪೋಲೀಸರೆಲ್ಲಾ ನಿನ್ನ ಹಿಂದೆಯೇ ಇರುವಂತೆ ಮಾಡಿಕೊಳ್ಳಬೇಡ ಬಿ ಕೇರ್‌ಫುಲ್" ಹೇಳಿ ಆದಾಗ ವೈಟ್ ಅಂಬಾಸಡರ್ ಬ್ಯಾಕ್ ಡೋರ್ ತೆಗೆಯುತ್ತಿದ್ದ ಬಾಬುವಿಗೆ ಸನ್ನೆ ಮಾಡಿದರು ಕರ್ನಲ್.

ಮಹೇಶ ಹಿಂದಿನ ಸೀಟಿನಲ್ಲಿ ಕೂರುತ್ತಿದ್ದಂತೆ ಸೆಲ್ ಹೆಡ್ ಕ್ವಾರ್ಟರ್ಸ್ ಕಡೆಗೆ ಪ್ರಯಾಣಿಸಿತು ಕಾರು....

ಸಡನ್ ಜರ್ಕ್‌ನೊಡನೆ ಟ್ಯಾಕ್ಸಿ ನಿಂತಾಗ ಬೆಚ್ಚಿ ಬಿದ್ದು ತನ್ನ ಆಲೋಚನೆಗಳಿಂದ ಹೊರ ಬಂದ ಮಹೇಶ. ಅವನು ರೂಂ ತೆಗೆದು ಕೊಂಡಿದ್ದ ಹೋಟೆಲ್ ಮುಂದೆ ಗಾಡಿ ನಿಲ್ಲಿಸಿ ಅವನ ಕಡೆಗೆ ವಿಚಿತ್ರ ನೋಟ ಬೀರುತ್ತಾ ಕುಳಿತಿದ್ದ ಡ್ರೈವರ್. ನಿದ್ರೆ ಹೋಗಿ ಬಿಟ್ಟನೇ ಎಂಬ ಸಂಶಯ ಬಂದಂತಿತ್ತು ಅವನಿಗೆ !

ತುಟಿಗಳ ಮೇಲೆ ನಗೆ ತಂದುಕೊಂಡು ಕೆಳಗಿಳಿದು ಟ್ಯಾಕ್ಸಿ ಫೇರ್ ಮೇಲೆ ಹತ್ತು ರೂಪಾಯಿ ಟಿಪ್ಸ್ ಕೊಟ್ಟು ಹೋಟೆಲ್ ಕಡೆಗೆ ಹೆಜ್ಜೆ ಹಾಕಿದ ಮಹೇಶ.

ಅಂದುಕೊಂಡಂತೆಯೇ ಸಿಬಿಐ ಏಜೆಂಟ್ ಕರ್ಣನ ಭೇಟಿಯೇನೋ ಆಗಿತ್ತು. ಕರ್ಣನಲ್ಲಲ್ಲ... ನಿರ್ಜೀವ ಕರ್ಣನನ್ನ ! ತಾನು ಸತ್ತರೂ ತನ ಗಾಗಿ ಒಂದು ಕ್ಲೂ ಬಿಟ್ಟು ಹೋಗಿರುವ ಕರ್ಣನ ಆ ಎಳೆಯ ಮೂಲಕವೇ ಅಸೈನ್‌ಮೆಂಟ್ ಮುಂದುವರೆಸಬೇಕೀಗ.

ನಿಟ್ಟುಸಿರುಗರೆಯುತ್ತಾ ಹೋಟೆಲ್ ಲಾಬಿಯೊಳಕ್ಕೆ ಪ್ರವೇಶಿಸಿದ ಮಹೇಶ.

ರಿಸೆಪ್ಷನಿಸ್ಟ್ ಮುಖ ತನ್ನ ನೋಡಿದಾಗ ಕ್ಷಣ ಬಣ್ಣ ಬದಲಿಸಿ ಮತ್ತೆ ಮೊದಲಿನಂತಾದುದನ್ನು ಅವನ ಚುರುಕುಗಣ್ಣುಗಳು ಗಮನಿಸಿದ್ದವು. ಮೆಟ್ಟಿಲುಗಳ ಕಡೆಗೆ ಹೋಗುತ್ತಿರುವಾಗಲೂ ಅವನ ಕಳ್ಳ ನೋಟ ತನ್ನನ್ನು ಹಿಂಬಾಲಿಸುತ್ತಿದೆ ಎಂದರ್ಥವಾಗಿತ್ತು. ಮೆಟ್ಟಿಲು ಸಮೀಪಿಸಿ ತಟಕ್ಕನೆ ಹಿಂದಕ್ಕೆ ತಿರುಗಿ ನೋಡಿದ ಕಂಗಾಲಾಗಿ ಮುಖ ತಿರುಗಿಸಿಕೊಂಡ ರಿಸೆಪ್ಷನಿಸ್ಟ್. ಅವನ ಈ ನಡವಳಿಕೆಗೇನು ಕಾರಣ ಎಂದು ಯೋಚಿಸುತ್ತಾ ಹೆಜ್ಜೆಗೆರಡು ಮೆಟ್ಟಿಲಂತೆ ಕ್ರಮಿಸಿ ಮೇಲಕ್ಕೆ ಹೋದ ಮಹೇಶ.

ರೂಂ ಸಮೀಪಿಸಿ ಬಾಗಿಲು ತೆಗೆಯ ಹೋದವನು ಕ್ಷಣ ತಡೆದ. ಕೊಠಡಿಯೊಳಗೆ ಯಾರೋ ಪ್ರವೇಶಿಸಿದ್ದಾರೆಂಬ ಸಂದೇಹ ಉದಯಿಸಿತ್ತು ಮನದಲ್ಲಿ.

ಡೋರ್ ಹ್ಯಾಂಡಲ್ ಮೇಲೆ ಎಚ್ಚರಿಕೆಯೊಡನೆ ಕೈ ಹಾಕಿ ಮುಂದಕ್ಕೆ ತಳ್ಳಿದ. ನಿಶ್ಶಬ್ದವಾಗಿ ತೆರೆದುಕೊಂಡಿತು ಬಾಗಿಲು. ಹೋಲ್‌ಸ್ಟರ್‌ನಲ್ಲಿದ್ದ 'ರಾಣಿ'ಯನ್ನು ಫಾಸ್ಟ್ ಡ್ರಾ ಮಾಡಲು ಅನುಕೂಲವಾಗುವಂತೆ ಷರ್ಟ್‌ನ ಮೇಲಿನೆರಡು ಬಟನ್ಸ್ ತೆಗೆದು ಅಲರ್ಟಾಗಿ ಒಳಕ್ಕೆ ಕಾಲಿಟ್ಟ.

ಬಾಗಿಲ ಪಕ್ಕದಲ್ಲೇ ಇತ್ತು ಲೈಟ್ ಸ್ವಿಚ್. ಕತ್ತಲಲ್ಲಿ ತೀಕ್ಷ್ಣವಾಗಿ ನೋಡುತ್ತಾ ಮೆಲ್ಲಗೆ ತಡವಿ ಸ್ವಿಚ್ ಆನ್ ಮಾಡಿದ. ಫಕ್ಕನೆ ಹತ್ತಿತು ಟ್ಯೂಬ್‌ಲೈಟ್. ರೂಮೆಲ್ಲವನ್ನು ಪರಿಶೀಲಿಸಿದವು ಕಣ್ಣುಗಳು. ಒಂದೇ ವಸ್ತುವೂ ಸ್ಥಾನಪಲ್ಲಟಗೊಂಡ ಸೂಚನೆಗಳಿಲ್ಲ. ಹೇಗಿದ್ದವು ಹಾಗೆಯೇ ಇದ್ದವು. ಆದರೂ ಅವನ ಮನದಲ್ಲಿ ಹೊಗೆಯಾಡುತ್ತಲೇ ಇತ್ತು ಅನುಮಾನ. ಕೊಠಡಿಯ ಎಲ್ಲೆಡೆ ಕಣ್ಣಾಡಿಸಿಕೊಂಡೇ ಬಾತ್‌ರೂಂ ಕಡೆಗೆ ಹೋದ.

ಬಾತ್‌ರೂಂ ಬಾಗಿಲ ಮೇಲೆ ಕೈ ಇರಿಸಿ ಉಸಿರು ಬಿಗಿಹಿಡಿದು ಮುಂದಕ್ಕೆ ತಳ್ಳಿದ. ಕರ್ರೆಂದು ಶಬ್ದ ಮಾಡುತ್ತಾ ತೆರೆದುಕೊಂಡಿತದು.

ಎದುರಿಗೆ ಕಾಣಿಸಿದ ದೃಶ್ಯದಿಂದ ಕ್ಷಣ ದಿಗ್ಭ್ರಾಂತನಾಗಿ ನಿಂತು ಬಿಟ್ಟ ಅವನು.

ಬಾತ್‌ರೂಂನೊಳಗಿನ ವೆಸ್ಟರ್ನ್ ಸ್ಟೈಲ್ ಬಾತ್ ಮೇಲೆ ಕುಳಿತಿದ್ದನೊಬ್ಬ ವ್ಯಕ್ತಿ. ಅವನ ನೋಟ ಈಗ ಮಹೇಶನನ್ನೇ ದುರುಗುಟ್ಟಿ ನೋಡುತ್ತಿತ್ತು. ಅವನ ಮೈ ಮೇಲಿನ ಬಟ್ಟೆಗಳು ಹರಿದು ಚಿಂದಿಯಾಗಿದ್ದವು. ಅವನ ಹೊಟ್ಟೆಯೊಳಗೆ ಅರ್ಧ ಒಡೆದ ರಂ ಬಾಟಲೊಂದು ಲಾಡ್ಜ್ ಆಗಿತ್ತು! ರಕ್ತ ಆ ಬಾಟಲ್ ಸುತ್ತಲೂ ಉಕ್ಕುತ್ತಾ ತೊಟ್ಟು ತೊಟ್ಟೇ ಕೆಳಕ್ಕೆ ಬೀಳುತ್ತಿತ್ತು!

ನೋಡಿದೊಡನೆ ಅರ್ಥವಾಗಿತ್ತು ಆ ವ್ಯಕ್ತಿಯ ಪ್ರಾಣ ಹೋಗಿ ಅರ್ಧ ಗಂಟೆಯ ಮೇಲಾಗಿದೆಯೆಂದು.

ಅವನೂ ಅಪರಿಚಿತನೇನಲ್ಲ ಮಹೇಶನಿಗೆ.

ಸಂಜೆ ಮಾರ್ಕೆಟ್ ಏರಿಯಾದಲ್ಲಿ ಅವನ ಕೈನಲ್ಲಿ ಒದೆ ತಿಂದಿದ್ದ ರೋಲ್‌ಕಾಲ್ ದಾದ ರೋನಿ!

ಐದು ಕ್ಷಣವೇ ಹಿಡಿದಿತ್ತು ಮಹೇಶನಿಗೆ. ಆ ಷಾಕ್‌ನಿಂದ ಹೊರ ಬೀಳಲು.

ಎರಡೇ ಗಂಟೆಗಳ ಹಿಂದೆ ಮಾರ್ಕೆಟ್ ಏರಿಯಾದಲ್ಲಿ ತಾನು ಕಣ್ಣಾರೆ ಕಂಡಿದ್ದ ರೋನಿ ಈಗ ಹೀಗೆ ತನ್ನ ರೂಂನಲ್ಲಿ ಶವಾಕಾರದಲ್ಲಿ ದರ್ಶನ ಕೊಡುತ್ತಿರುವುದು ಅರ್ಥವಾಗದ ಪಜ಼ಲ್‌ನಂತೆ ತೋರತೊಡಗಿತ್ತು.

ಹೆಜ್ಜೆ ಮುಂದಿಟ್ಟು ಪರೀಕ್ಷಕ ನೋಟ ಬೀರಿದ ಹೆಣದತ್ತ ರಂ ಬಾಟಲ್ ಹೊಟ್ಟೆಯೊಳಗೆ ಬಲವಾಗಿ ನಾಟಿಕೊಂಡಿರುವುದರಿಂದಲೇ ಪ್ರಾಣ ಹೋಗಿತ್ತು ಅವನಿಗೆ.

ಆಗಲೇ ಹೋಟೆಲ್‌ನ ಹೊರಗೆ ಏನೋ ಶಬ್ದ ಕೇಳಿ ಬಂದಿತ್ತು. ಬೆಚ್ಚಿ ಬಿದ್ದ ಮಹೇಶ. ಅನುಭವ ಅವನಿಗೆ ಆ ಸೌಂಡ್‌ನ ಅರ್ಥವೇನೆಂದು ತಿಳಿಸಿ ಬಿಟ್ಟಿತ್ತು.

ಪೋಲೀಸ್ ಜೀಪ್ ಬಂದು ನಿಂತಿದೆ ಹೋಟೆಲ್ ಮುಂದೆ !

ಒಂದೇ ಹೆಜ್ಜೆಯಲ್ಲಿ ಬಾತ್‌ರೂಂನಿಂದ ಹೊರಬಿದ್ದು ಕಿಟಕಿಯ ಬಳಿಗೆ ತಲುಪಿದ ಮಹೇಶ. ಅಲ್ಲಿಂದ ಹೋಟೆಲ್ ಮುಂಭಾಗ ಸ್ಪಷ್ಟವಾಗಿ ಕಾಣ ಬಹುದಿತ್ತು. ಆಗಲೇ ಜೀಪ್‌ನಿಂದ ಟಕಟಕನೆ ಕೆಳಗಿಳಿದರು ಅರ್ಧ ಡಜನ್ ಕಾನ್‌ಸ್ಟೇಬಲ್ಸ್. ಒಬ್ಬ ಇನ್ಸ್‌ಪೆಕ್ಟರ್ ಆದೀಗ ಹೋಟೆಲ್‌ನೊಳಕ್ಕೆ ಪ್ರವೇಶಿಸುತ್ತಿದ್ದ,

ನಿಮಿಷದಲ್ಲಿ ಪರಿಸ್ಥಿತಿ ಅರ್ಥವಾಗಿ ಬಿಟ್ಟಿತ್ತು ಮಹೇಶನಿಗೆ. ಶತ್ರು ಗಳಿಗೆ ತನ್ನ ಸುಳಿವು ಸಿಕ್ಕಿಬಿಟ್ಟಿರುವುದಷ್ಟೇ ಅಲ್ಲ ಬಹಳ ಬ್ಯೂಟಿಫುಲ್ಲಾಗಿ ತನ್ನನ್ನು ಇಕ್ಕಟ್ಟಿಗೆ ಸಿಗಿಸುವ ಷಡ್ಯಂತ್ರವನ್ನು ರೂಪಿಸಿದ್ದಾರೆ. ರೋನಿ ಜೊತೆಗಿನ ತನ್ನ ಫೈಟಿಂಗ್ ನೋಡಿದ ಅವರು ಅವನನ್ನು ಬುದ್ಧಿವಂತಿಕೆ ಯೊಡನೆ ಇಲ್ಲಿಗೆ ಕರೆತಂದು ತಾನೇ ಮಧ್ಯಾಹ್ನ ಮುಗಿಸಿದ್ದ ರಂ ಬಾಟಲ್ ನಿಂದ ಕೊಲೆ ಮಾಡಿದ್ದಾರೆ !

ಈ ಕ್ಷಣದಲ್ಲಿ ಪೋಲೀಸರು ಇಲ್ಲಿನ ದೃಶ್ಯ ನೋಡಿದರೆ ತನ್ನನ್ನು ಇಮ್ಮೀಡಿಯೆಟ್ಟಾಗಿ ಅರೆಸ್ಟ್ ಮಾಡುತ್ತಾರೆ. ಸತ್ತ ರೋನಿ ದಾದಾ ಹೊಟ್ಟೆ ಯಲ್ಲಿರುವ ರಂ ಬಾಟಲ್ ಮೇಲೆ ತನ್ನ ಬೆರಳು ಗುರುತುಗಳಿರುವುದು ಖಚಿತ. ಆದ್ದರಿಂದಲೇ ಮರ್ಡರ್ ವೆಪನ್ನಾಗಿ ಅದನ್ನು ಉಪಯೋಗಿಸಿರುವುದು ! ಚೆಕ್ ಮಾಡಿದರೆ ತಾನು ಸಂಜೆ ರೋನಿದಾದಾ ಜೊತೆಗೆ ಹೋರಾಟಕ್ಕಿಳಿದ

ಎವಿಡೆನ್ಸ್ ಸಿಕ್ಕೇ ಸಿಗುತ್ತದೆ. ಇಷ್ಟು ಸಾಕು ತನ್ನನ್ನು ಅಪರಾಧಿಯನ್ನಾಗಿ ನಿರೂಪಿಸಲು

ಗೋಲ್ ಪೋಸ್ಟ್ ಕಡೆಗೆ ಕಿಕ್ ಮಾಡಿದ ಫುಟ್‌ಬಾಲ್‌ನಷ್ಟೇ ಫಾಸ್ಟಾಗಿ ರಿಯಾಕ್ಟ್ ಆದ ಮಹೇಶ. ಆ ಪರಿಸ್ಥಿತಿಯಲ್ಲಿ ಅಲ್ಲಿಂದ ತಪ್ಪಿಸಿಕೊಳ್ಳುವುದಕ್ಕಿಂತಾ ಇನ್ಯಾವುದೇ ದಾರಿಯಿಲ್ಲ. ತೆರೆದಿರುವ ಗಾಜಿನ ಕಿಟಕಿಗಳು ಆಹ್ವಾನಿಸಿದವು ಅವನನ್ನ. ಅಲ್ಲಿಗೆ ಸರಿದು ಕೆಳಕ್ಕೆ ಬಗ್ಗಿ ನೋಡಿದ. ಕಪ್ಪು ಕತ್ತಲ ವಿನಹ ಕೆಳಗೇನಿದೆ ಎಂದು ಕಾಣಿಸುತ್ತಿರಲಿಲ್ಲ. ಕ್ಷಣ ರಿಸರ್ಚ್ ಮಾಡುವ ವ್ಯವಧಿಯೂ ಇರಲಿಲ್ಲ ಅವನಿಗೆ.

ಮೆಟ್ಟಿಲ ಬಳಿ ಬೂಟುಗಾಲುಗಳ ಶಬ್ದ ಕೇಳಿ ಬರತೊಡಗಿತು.

ತನ್ನ ಡೌಟ್‌ಗಳನ್ನೆಲ್ಲಾ ಒತ್ತಟ್ಟಿಗೆ ಸರಿಸಿ ಕಿಟಕಿಯ ಮೇಲೆ ಹತ್ತಿದ ಮಹೇಶ.

ಆಗಲೇ ಬಾಗಿಲ ಬಳಿ ಪ್ರತ್ಯಕ್ಷನಾಗಿದ್ದ ಇನ್‌ಸ್ಪೆಕ್ಟರ್.

ಕಿಟಕಿಯಿಂದ ಹೊರಕ್ಕೆ ನೆಗೆಯುತ್ತಿದ್ದ ಮಹೇಶನನ್ನು ಕಂಡೊಡನೆ ಸೊಂಟದ ಹೋಲ್‌ಸ್ಟರ್‌ನಿಂದ ಪಿಸ್ತೂಲನ್ನು ಹೊರಕ್ಕೆ ತೆಗೆಯುವ ಪ್ರಯತ್ನ ಮಾಡಿದ.

"ಸ್ಟಾಪ್ ! ಜಂಪ್ ಮಾಡಿದರೆ ಸಾಯುವೆ .." ಷೌಟ್ ಮಾಡುತ್ತಾ ಪಿಸ್ತೂಲನ್ನು ಹೊರಕ್ಕೆಳೆದ.

ಕಣ್ಣು ಮುಚ್ಚಿ ಕೆಳಕ್ಕೆ ನೆಗೆದೇ ಬಿಟ್ಟ ಮಹೇಶ

ಹಲ್ಲು ಕಡಿಯುತ್ತಾ ಪಿಸ್ತೂಲಿಡಿದು ಕಿಟಕಿಯ ಬಳಿಗೆ ಓಡಿ ಬಂದ ಇನ್‌ಸ್ಪೆಕ್ಟರ್. ಕಾಣಿಸಲೇನಿತ್ತು ಅಲ್ಲಿ ಎಲ್ಲೆಡೆ ಆವರಿಸಿರುವ ಗಾಢಾಂಧಕಾರದ ವಿನಹ !

ಆಗಲೇ ಏದುಸಿರು ಬಿಡುತ್ತಾ ಮೇಲೆ ಬಂದ ಪೋಲೀಸರಿಗೆ ಕೊಠಡಿಯನ್ನು ಹುಡುಕುವಂತೆ ಆದೇಶಿಸಿ ತಾನು ಕೊಠಡಿಯಿಂದ ಹೊರಕ್ಕೆ ನಡೆದ ಇನ್ಸ್‌ಪೆಕ್ಟರ್.

ಅಷ್ಟು ಎತ್ತರದಿಂದ ಕೆಳಕ್ಕೆ ನೆಗೆದೊಡನೆ ತನ್ನ ಕೈಯ್ಯೋ, ಕಾಲೋ ಜಖಂ ಆಗುವುದು ಗ್ಯಾರಂಟಿ ಎಂದು ತೀರ್ಮಾನಿಸಿ ಬಿಟ್ಟಿದ್ದ ಮಹೇಶ. ಆದ್ದರಿಂದಲೇ ಶರೀರವನ್ನು ಟೈಟ್ ಮಾಡದೆ ಸಡಲಿಸಿ ಪಕ್ಷಿಯಂತೆ ಕೆಳಕ್ಕೆ ಜಾರಿಬಿಟ್ಟ ತಲೆಕೆಳಗಾಗಿ.

ಆ ಕಿಟಕಿ ಹೋಟೆಲ್‌ನ ಹಿಂಭಾಗಕ್ಕಿತ್ತು. ಹೋಟೆಲ್‌ನಲ್ಲಿ ಉಪಯೋಗಿಸಿದ ನೀರೆಲ್ಲಾ ಅಲ್ಲಿ ಒಂದೆಡೆ ಹಳ್ಳದಲ್ಲಿ ಸಂಗ್ರಹಗೊಂಡು ಕೆಸರ ಗುಂಡಿಯಾಗಿತ್ತು. ನೇರ ಆ ಕೆಸರ ಗುಂಡಿಯೊಳಗೇ ಬಿದ್ದಿದ್ದ ಮಹೇಶ!

ನ್ಯೂಟನ್‌ನ ಮೂರನೇ ನಿಯಮದನುಸಾರವಾಗಿ ಫೌಂಟನ್‌ನಂತೆ ಮೇಲೆ ಚಿಮ್ಮಿತ್ತು ಕೆಸರು. ಕಕ್ಕಾಬಿಕ್ಕಿಯಾಗಿಬಿಟ್ಟ ಅವನು.

ಆ ಕೆಸರಲ್ಲಿ ಉರುಳಾಡುತ್ತಾ ತಮ್ಮದೇ ಪ್ರಣಯ ಲೋಕದಲ್ಲಿ ವಿಹರಿಸುತ್ತಿದ್ದವು ಹಂದಿಗಳ ಜೋಡಿ. ತಮ್ಮ ಏಕಾಂತಕ್ಕೆ ಭಂಗ ತಂದ ಅವನು. ತಮ್ಮದೇ ಭಾಷೆಯಲ್ಲಿ ತೆಗಳುತ್ತಾ ದಿಕ್ಕಾಪಾಲಾದವು.